# ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ

ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು–560 018. ದೂರವಾಣಿ: 080–26701303


## ೦೫.೧೨.೨೦೧೧ರಂದು ನಡೆದ ಪ್ರಶಾಸನ ಸಮಿತಿಯ ೧ನೇ ಸಭೆಯ ನಡಾವಳಿ

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಪ್ರಶಾಸನ ಸಮಿತಿಯ ೧ನೇ ಸಭೆಯು ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ಡಿಸೆಂಬರ್ ೦೫, ೨೦೧೧ರ ಸೋಮವಾರದಂದು ಮಧ್ಯಾಹ್ನ ೦೨.೩೦ ಗಂಟೆಗೆ ನಡೆಯಿತು. ಈ ಸಭೆಯಲ್ಲಿ ಕೆಳಕಂಡ ಮಾನ್ಯ ಸದಸ್ಯರು ಹಾಜರಿದ್ದರು.

**ಹಾಜರಿದ್ದವರು:**

| | | |
|---|---|---|
| ೧. | **ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ,** ಮಾನ್ಯ ಕುಲಪತಿಗಳು | ಅಧ್ಯಕ್ಷರು |
| ೨. | **ಪ್ರೊ. ಎನ್. ಅಶ್ವತ್ಥಮ್ಮ,** ಮೈಸೂರು | ಸದಸ್ಯರು |
| ೩. | **ಡಾ. ಸಿದ್ಧಲಿಂಗ ಶಿವಾಚಾರ್ಯ ಮಹಾಸ್ವಾಮಿಗಳು,** ಕವಲೇದುರ್ಗ | ಸದಸ್ಯರು |
| ೪. | **ಡಾ. ಎಚ್.ಆರ್. ವಿಶ್ವಾಸ್,** ಮಂಗಳೂರು | ಸದಸ್ಯರು |
| ೫. | **ಡಾ. ಪಿ.ಬಿ. ಸಂತಪ್ಪನವರ,** ಗುಲಬರ್ಗಾ | ಸದಸ್ಯರು |
| ೬. | **ಡಾ. ಟಿ.ಎಸ್. ಸತ್ಯವತಿ,** ಬೆಂಗಳೂರು | ಸದಸ್ಯರು |
| ೭. | **ಶ್ರೀ ಪಿ. ಸುರೇಂದ್ರಕುಮಾರ,** ಬೆಂಗಳೂರು | ಸದಸ್ಯರು |
| ೮. | **ಉಪ ನಿರ್ದೇಶಕರು,** ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯ ನಿರ್ದೇಶನಾಲಯ, ಬೆಂಗಳೂರು | ಸದಸ್ಯರು |
| ೯. | **ಡಾ. ಚಂದ್ರಮೌಳಿ ಎಸ್. ನಾಯ್ಕರ,** ಕುಲಸಚಿವರು | ಸದಸ್ಯ ಕಾರ್ಯದರ್ಶಿ |

**ಗೈರುಹಾಜರಿ:**

| | | |
|---|---|---|
| ೧. | **ಪಂ. ಜಯತೀರ್ಥಾಚಾರ್ಯ ವಾ. ಮಳಗಿ,** ಧಾರವಾಡ | ಸದಸ್ಯರು |
| ೨. | **ಶ್ರೀ ಜಿ. ಹನುಮಂತರಾಯಪ್ಪ,** ತುಮಕೂರು | ಸದಸ್ಯರು |
| ೩. | **ಪ್ರಧಾನ ಕಾರ್ಯದರ್ಶಿಗಳು,** ಉನ್ನತ ಶಿಕ್ಷಣ ಇಲಾಖೆ, ಬೆಂಗಳೂರು | ಸದಸ್ಯರು |
| ೪. | **ಪ್ರಧಾನ ಕಾರ್ಯದರ್ಶಿಗಳು,** ಹಣಕಾಸು ಇಲಾಖೆ, ಬೆಂಗಳೂರು | ಸದಸ್ಯರು |
| ೫. | **ಸರ್ಕಾರದ ಕಾರ್ಯದರ್ಶಿಗಳು,** ಧಾರ್ಮಿಕ ದತ್ತಿ ಇಲಾಖೆ, ಬೆಂಗಳೂರು | ಸದಸ್ಯರು |
| ೬. | **ಆಯುಕ್ತರು,** ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು | ಸದಸ್ಯರು |
| ೭. | **ಪ್ರಾದೇಶಿಕ ನಿರ್ದೇಶಕರು,** ಯುಜಿಸಿ–ನೈರುತ್ಯ ಪ್ರಾದೇಶಿಕ ಕೇಂದ್ರ, ಬೆಂಗಳೂರು | ಸದಸ್ಯರು |

ಸಭೆಯ ಪ್ರಾರಂಭಕ್ಕೆ ಮಾನ್ಯ ಕುಲಪತಿಗಳು ಎಲ್ಲ ಗೌರವಾನ್ವಿತ ಸದಸ್ಯರನ್ನು ಸ್ವಾಗತಿಸಿದರು. ಅನಂತರ ಸಭೆಯಲ್ಲಿ ಕೆಳಕಂಡ ಕಾರ್ಯಸೂಚಿಗಳು ಮಂಡಿತವಾದವು.

**ವಿಷಯ 1: ದಿನಾಂಕ: 21.05.2011ರಂದು ನಡೆದ ಪ್ರಶಿಕ್ಷಣ ಪರಿಷತ್ತಿನ ಸಭೆಯ ನಡಾವಳಿಗಳ ಅನುಮೋದನೆಗೆ ಬಗೆಗೆ.**

ಟಿಪ್ಪಣಿ: ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಪ್ರಶಿಕ್ಷಣ ಪರಿಷತ್ತಿನ ಮೊದಲ ಸಭೆಯು ದಿನಾಂಕ ಮೇ 21, 2011ರ ಶನಿವಾರ ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ನಡೆಯಿತು. ಈ ಸಭೆಯಲ್ಲಿ ವಿಶ್ವವಿದ್ಯಾಲಯದ ಶೈಕ್ಷಣಿಕ ಚಟುವಟಿಕೆಗಳಿಗೆ ಸಂಬಂಧಪಟ್ಟ ಹಲವು ವಿಷಯಗಳ ಬಗೆಗೆ ವಿಸ್ತೃತವಾದ ಚರ್ಚೆಯನ್ನು ನಡೆಸಿ ಪ್ರಶಿಕ್ಷಣ ಪರಿಷತ್ತಿನ ಅನುಮೋದನೆಯನ್ನು ಪಡೆಯಲಾಯಿತು. ಈ ಸಭೆಯ ನಡಾವಳಿಯನ್ನು ಪ್ರಶಾಸನ ಸಭೆಯ ಅನುಮೋದನೆಗಾಗಿ ಮಂಡಿಸಿದೆ.

ನಿರ್ಣಯ: **ಪ್ರಶಿಕ್ಷಣ ಪರಿಷತ್ತಿನ ನಡಾವಳಿಗಳನ್ನು ಸಭೆಯು ಪರಿಶೀಲಿಸಿ ತನ್ನ ಅನುಮೋದನೆಯನ್ನು ನೀಡಿತು.**

**ವಿಷಯ 2: 2010–11ನೇ ಸಾಲಿನಲ್ಲಿ ನೂತನವಾಗಿ ಸಂಸ್ಕೃತ ಪದವಿ ಕಾಲೇಜುಗಳನ್ನು ಪ್ರಾರಂಭಿಸಿರುವುದರ ಬಗೆಗೆ ಘಟನೋತ್ತರ ಅನುಮೋದನೆ.**

ಟಿಪ್ಪಣಿ: ರಾಜ್ಯದ ಕೆಲವು ಸಂಸ್ಕೃತ ಪಾಠಶಾಲೆಗಳ ಆಡಳಿತ ಮಂಡಳಿಯವರು ಕಾಲೇಜುಗಳನ್ನು ಆರಂಭಿಸಲು ಅನುಮತಿಯನ್ನು ನೀಡುವಂತೆ ವಿಶ್ವವಿದ್ಯಾಲಯವನ್ನು ಕೋರಿದ್ದರು. ಈ ಹಿನ್ನೆಲೆಯಲ್ಲಿ ಮಾನ್ಯತಾ ಸಮಿತಿಯನ್ನು ರಚಿಸಲಾಗಿತ್ತು. ಕಾಲೇಜು ಆರಂಭಿಸಲು ಬೇಕಾದ ಅಗತ್ಯ ಸೌಲಭ್ಯಗಳನ್ನು ಪರಿಶೀಲಿಸಿದ ನಂತರ ಕಾಲೇಜುಗಳನ್ನು ಆರಂಭಿಸಲು ಮಾನ್ಯತಾ ಸಮಿತಿಯು ಶಿಫಾರಸ್ಸು ಮಾಡಿದ ಕಾರಣ ಐದು ನೂತನ ಕಾಲೇಜುಗಳಲ್ಲಿ ಬಿ.ಎ. ವಿದ್ವನ್ಮಧ್ಯಮಾ ಪ್ರಥಮ ವರ್ಷದ ತರಗತಿಗಳನ್ನು ಆರಂಭಿಸಲು ಒಂದು ವರ್ಷದ ಅವಧಿಗೆ ಅನುಮತಿಯನ್ನು ನೀಡಲಾಗಿದೆ. ಐದು ನೂತನ ಕಾಲೇಜುಗಳ ವಿವರಗಳು ಹೀಗಿವೆ:

| ಕಾಲೇಜುಗಳ ವಿವರ | ಅನುಮತಿ ನೀಡಿದ ಶಾಸ್ತ್ರಭಾಗ |
|---|---|
| ವೇದವಿಜ್ಞಾನ ಶೋಧಸಂಸ್ಥಾನಮ್, ಬೆಂಗಳೂರು | ಅದ್ವೈತವೇದಾಂತ, ವ್ಯಾಕರಣ |
| ಶ್ರೀ ಆದಿಚುಂಚನಗಿರಿ ಸಂಸ್ಕೃತ ಕಾಲೇಜು, ಹಾಸನ | ಅಲಂಕಾರ, ಅದ್ವೈತವೇದಾಂತ |
| ಶ್ರೀ ಫಿರಂಗಿಸ್ವಾಮಿ ಸಂಸ್ಕೃತ ಕಾಲೇಜು, ಅಂಕನಹಳ್ಳಿಮಠ, ಕುಣಿಗಲ್ ತಾ. | ಅಲಂಕಾರ, ಶಕ್ತಿವಿಶಿಷ್ಟಾದ್ವೈತವೇದಾಂತ |
| ಶ್ರೀ ಸದ್ಗುರು ಕಬೀರಾನಂದಸ್ವಾಮಿ ಸಂಸ್ಕೃತ ಪದವಿ ಕಾಲೇಜು, ಚಿತ್ರದುರ್ಗ | ಅಲಂಕಾರ, ಅದ್ವೈತವೇದಾಂತ |
| ಶ್ರೀ ಶಿವಯೋಗೀಶ್ವರ ಸಂಸ್ಕೃತ ಪದವಿ ಕಾಲೇಜು, ಇಂಚಲ, ಬೆಳಗಾವಿ ಜಿ. | ಅಲಂಕಾರ, ಅದ್ವೈತವೇದಾಂತ |

ನಿರ್ಣಯ: **ಮೇಲ್ಕಂಡ ಐದು ನೂತನ ಕಾಲೇಜುಗಳಿಗೆ ಒಂದು ವರ್ಷದ ಅವಧಿಗೆ ಮಾನ್ಯತೆ ನೀಡಿರುವುದನ್ನು ಸಭೆಯು ಪರಿಶೀಲಿಸಿ ತನ್ನ ಅನುಮೋದನೆಯನ್ನು ನೀಡಿತು.**

## ವಿಷಯ 3: ಅನುದಾನಿತ–ಅನುದಾನರಹಿತ ಪಾಠಶಾಲೆಗಳನ್ನು ತ್ರಿಸದಸ್ಯ ಸಮಿತಿಯಿಂದ ತಪಾಸಣೆ ಮತ್ತು ಮಾನ್ಯತೆ ನೀಡಿಕೆಯ ಬಗೆಗೆ ಘಟನೋತ್ತರ ಅನುಮೋದನೆ.

ಟಿಪ್ಪಣಿ: ಕರ್ನಾಟಕ ರಾಜ್ಯದ ಪಾರಂಪರಿಕ ಶಿಕ್ಷಣ ವ್ಯವಸ್ಥೆಯನ್ನು ಸಮಗ್ರವಾಗಿ ಒಂದೇ ಛತ್ರದಡಿಯಲ್ಲಿ ತಂದು ಬಲಪಡಿಸುವ ಹಿನ್ನೆಲೆಯಲ್ಲಿ ಸಂಸ್ಕೃತ ಪಾಠಶಾಲೆಗಳ ನಿರ್ವಹಣೆಗಾಗಿ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಅಧೀನವಾಗಿ ಸಂಸ್ಕೃತ ಶಿಕ್ಷಣ ನಿರ್ದೇಶನಾಲಯವನ್ನು ಸ್ಥಾಪಿಸಿ ದಿನಾಂಕ: 15.06.2011ರಂದು ಸರ್ಕಾರವು ಆದೇಶ (ಇಡಿ 218 ಯುಆರ್‌ಸಿ 2010) ಹೊರಡಿಸಿತು. ಆನಂತರ ನಿರ್ದೇಶನಾಲಯದ ಅಡಿಯಲ್ಲಿ ತರಲಾದ ಎಲ್ಲ ಅನುದಾನಿತ ಹಾಗೂ ಅನುದಾನರಹಿತ ಪಾಠಶಾಲೆಗಳನ್ನು ಭೌತಿಕವಾಗಿ ಸಂದರ್ಶಿಸಿ ಮಾನ್ಯತೆಯನ್ನು ನೀಡಲು 5 ತ್ರಿಸದಸ್ಯ ಸಮಿತಿಗಳನ್ನು ರಚಿಸಲಾಯಿತು. ಈ ಸಮಿತಿಗಳಿಗೆ ಪ್ರಶಿಕ್ಷಣ ಪರಿಷತ್ತಿನ ಸದಸ್ಯರಾದ ಮತ್ತು ಸಂಸ್ಕೃತ ಕಾಲೇಜುಗಳ ಪ್ರಾಚಾರ್ಯರಾದ ವಿದ್ವಾನ್ ಸಿ. ನಂಜುಂಡಯ್ಯ, ವಿದ್ವಾನ್ ಎ. ಹರಿದಾಸ ಭಟ್ಟ, ವಿದ್ವಾನ್ ಎಚ್.ಕೆ. ಸುರೇಶಾಚಾರ್ಯ, ವಿದ್ವಾನ್ ಚಂದ್ರಶೇಖರಯ್ಯ, ವಿದ್ವಾನ್ ವಿ.ಜಿ. ಹೆಗಡೆ –ಇವರನ್ನು ಅಧ್ಯಕ್ಷರನ್ನಾಗಿ ನೇಮಿಸಲಾಯಿತು. ಈ ಸಮಿತಿಗಳು 15 ದಿನಗಳ ಕಾಲ ಧಾರವಾಡ, ಚಿತ್ರದುರ್ಗ, ಮೈಸೂರು, ಬೆಂಗಳೂರು ವಲಯಗಳಲ್ಲಿ ವಿಭಕ್ತವಾದ 259 ಪಾಠಶಾಲೆಗಳನ್ನು ಸಂದರ್ಶಿಸಿ, ಮಾನ್ಯತೆಯನ್ನು ನವೀಕರಿಸಲು ಶಿಫಾರಸ್ಸು ಮಾಡಿದಂತೆ, ಪಾಠಶಾಲೆಗಳಿಗೆ ಮಾನ್ಯತಾಪ್ರಮಾಣಪತ್ರ ನೀಡಲಾಯಿತು.

ನಿರ್ಣಯ: **ಮೇಲ್ಕಂಡ ಅಂಶಗಳನ್ನು ಸವಿಸ್ತಾರವಾಗಿ ಚರ್ಚಿಸಿ ಸಭೆಯು ಅನುಮೋದನೆಯನ್ನು ನೀಡಿತು.**

## ವಿಷಯ 4: 2011–12ನೇ ಶೈಕ್ಷಣಿಕ ಸಾಲಿನಲ್ಲಿ ಅನುದಾನರಹಿತ ಹೊಸ ಪಾಠಶಾಲೆಗಳ ಆರಂಭ ಆಗಿವೆ. ಅವುಗಳಿಗೆ ಘಟನೋತ್ತರ ಅನುಮತಿ ಪಡೆಯುವ ಬಗೆಗೆ.

ಟಿಪ್ಪಣಿ: ರಾಜ್ಯದ ವಿವಿಧ ಜಿಲ್ಲೆಗಳಿಂದ ನಾನಾ ಸಂಸ್ಥೆಯವರು ನಿರ್ದೇಶನಾಲಯಕ್ಕೆ ಹೊಸ ಪಾಠಶಾಲೆಗಳ ಆರಂಭಕ್ಕಾಗಿ ಸಲ್ಲಿಸಿದ ಪ್ರಸ್ತಾವನೆಗಳನ್ನು ಪರಿಶೀಲಿಸಿ, ಅವುಗಳ ಭೌತಿಕ ಪರಿಶೀಲನೆ ಮಾಡಿಸಿ ಈ ಕೆಳಗಿನ ಹೊಸ ಪಾಠಶಾಲೆಗಳ ಆರಂಭಕ್ಕೆ ಅನುಮತಿ ಮತ್ತು ಒಂದು ವರ್ಷದ ಅವಧಿಗೆ 'ಶಾಶ್ವತ ಅನುದಾನರಹಿತ' ಮಾನ್ಯತೆ ನೀಡಲಾಗಿದೆ. ಈ ಪಾಠಶಾಲೆಗಳಲ್ಲಿ ಪ್ರಥಮಾ 1ನೇ ತರಗತಿಯನ್ನು ಆರಂಭಿಸಲಾಗಿದೆ.

| | | | |
|---|---|---|---|
| ಮೈಸೂರು ವಲಯ: | 16 ಪಾಠಶಾಲೆಗಳು | ಧಾರವಾಡ ವಲಯ: | 16 ಪಾಠಶಾಲೆಗಳು |
| ಬೆಂಗಳೂರು ವಲಯ: | 30 ಪಾಠಶಾಲೆಗಳು | ಚಿತ್ರದುರ್ಗ ವಲಯ: | 02 ಪಾಠಶಾಲೆಗಳು |
| **ಒಟ್ಟು:** | **64 ಪಾಠಶಾಲೆಗಳು** | | |

ನಿರ್ಣಯ: **ಮೇಲ್ಕಂಡ ಅಂಶಗಳನ್ನು ಸಭೆಯು ಚರ್ಚಿಸಿ ಹೊಸದಾಗಿ ಪಾಠಶಾಲೆಗಳು ಆರಂಭವಾಗಿರುವುದರ ಬಗೆಗೆ ತನ್ನ ಮೆಚ್ಚುಗೆಯನ್ನು ಸೂಚಿಸಿತು. ಅನಂತರ ಮುಂದಿನ ವರ್ಷದಲ್ಲಿ ಮತ್ತಷ್ಟು ಹೊಸದಾಗಿ ಪಾಠಶಾಲೆಗಳು ಸೂಕ್ತ ರೀತಿಯಿಂದ ಆರಂಭವಾಗುವುದು ಉಚಿತವೆಂದು ಸಭೆಯು ಅಭಿಪ್ರಾಯಿಸಿತು. ಹೊಸದಾಗಿ ಆರಂಭವಾಗಿರುವ ಅನುದಾನರಹಿತ 64 ಸಂಸ್ಕೃತ ಪಾಠಶಾಲೆಗಳಿಗೆ ಸಭೆಯು ತನ್ನ ಅನುಮೋದನೆಯನ್ನು ನೀಡಿತು.**

## ವಿಷಯ 5: ಸಂಸ್ಕೃತ ಪಾಠಶಾಲೆಗಳ ಪುನಶ್ಚೇತನ ಶಿಬಿರಗಳ ಆಯೋಜನೆಯ ಘಟನೋತ್ತರ ಅನುಮೋದನೆಯ ಬಗೆಗೆ.

ಟಿಪ್ಪಣಿ: ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಅಧೀನವಾಗಿ ನೂತನವಾಗಿ ಅಸ್ತಿತ್ವಕ್ಕೆ ಬಂದಿರುವ ಸಂಸ್ಕೃತ ಶಿಕ್ಷಣ ನಿರ್ದೇಶನಾಲಯವು ಸಂಸ್ಕೃತದ ಬೆಳವಣಿಗೆಯ ದೃಷ್ಟಿಯಿಂದ ಮೊದಲನೆಯ ಹಂತವಾಗಿ ಮಾನ್ಯ ಕುಲಪತಿಗಳ ಸೂಚನೆಯನ್ವಯ ಕರ್ನಾಟಕ ಸಂಸ್ಕೃತ ಪಾಠಶಾಲಾ ಶಿಕ್ಷಕರ ಸ್ತರವರ್ಧನೆಗಾಗಿ ರಾಜ್ಯದ ವಿವಿಧ ಪ್ರಾಂತಗಳಲ್ಲಿ ಮೂರು ದಿನಗಳ ಪುನಶ್ಚೇತನ ಶಿಬಿರಗಳನ್ನು ಆಯೋಜಿಸಲು ನಿರ್ಧರಿಸಲಾಯಿತು. ಅದರಂತೆ ಸಂಸ್ಕೃತ ಶಿಕ್ಷಣ ನಿರ್ದೇಶನಾಲಯವು ರಾಜ್ಯದ ನಾನಾ ಪ್ರಾಂತ್ಯಗಳಲ್ಲಿ ಪುನಶ್ಚೇತನ ಶಿಬಿರಗಳನ್ನು ಯಶಸ್ವಿಯಾಗಿ ಆಯೋಜಿಸಿತು. ಸ್ಥಳೀಯ ಶಿಕ್ಷಣ ಸಂಸ್ಥೆಗಳು ವಸತಿ ಮತ್ತು ಭೋಜನದ ವ್ಯವಸ್ಥೆಯನ್ನು ಮಾಡಿದ್ದವು. ಇತರ ಸಂಸ್ಥೆಗಳ ಸಹಯೋಗದೊಂದಿಗೆ ಈ ಕಾರ್ಯಕ್ರಮಗಳನ್ನು ಆಯೋಜಿಸಲಾಗಿತ್ತು.

ರಾಜ್ಯದ ನಾಲ್ಕು ವಲಯಗಳಲ್ಲಿ ನಡೆದ ಒಟ್ಟು 7 ಪುನಶ್ಚೇತನ ಶಿಬಿರಗಳಲ್ಲಿ 441 ಶಿಕ್ಷಕರು ಪಾಲ್ಗೊಂಡು, ಕಾರ್ಯಕ್ರಮದ ಪ್ರಯೋಜನಗಳನ್ನು ಪಡೆದುಕೊಂಡರು.

1. **ಶ್ರೀ ರವಿಶಂಕರ ಗುರೂಜಿ ಆಶ್ರಮ,** ಕನಕಪುರ ರಸ್ತೆ, ಬೆಂಗಳೂರು; 2011ರ ಏಪ್ರಿಲ್ 29, 30 ಹಾಗೂ ಮೇ 1ರಂದು ನಡೆದ ಶಿಬಿರದಲ್ಲಿ ಭಾಗವಹಿಸಿದ ಶಿಕ್ಷಕರ ಸಂಖ್ಯೆ 45. ಒಟ್ಟು ಖರ್ಚಾದ ಹಣ ರೂ. 28,124/–
2. **ಶ್ರೀ ಶಿವಾನಂದ ಭಾರತೀ ಶಿಕ್ಷಣ ಸಂಸ್ಥೆ,** ಇಂಚಲ; 2011ರ ಮೇ 9, 10 ಹಾಗೂ 11ರಂದು ನಡೆದ ಶಿಬಿರದಲ್ಲಿ ಭಾಗವಹಿಸಿದ ಶಿಕ್ಷಕರ ಸಂಖ್ಯೆ 46. ಒಟ್ಟು ಖರ್ಚಾದ ಹಣ ರೂ. 47,335/–
3. **ಶ್ರೀ ಬಿ.ಜಿ.ಎಸ್. ಅಂಧ ಮಕ್ಕಳ ವಸತಿ ಶಾಲೆ,** ಅರ್ಚಕರಹಳ್ಳಿ, ರಾಮನಗರ; 2011ರ ಮೇ 17, 18 ಹಾಗೂ 19ರಂದು ನಡೆದ ಶಿಬಿರದಲ್ಲಿ ಭಾಗವಹಿಸಿದ ಶಿಕ್ಷಕರ ಸಂಖ್ಯೆ 64. ಒಟ್ಟು ಖರ್ಚಾದ ಹಣ ರೂ. 34,480/–
4. **ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ,** ಮೈಸೂರು; 2011ರ ಜೂನ್ 27, 28 ಹಾಗೂ 29ರಂದು ನಡೆದ ಶಿಬಿರದಲ್ಲಿ ಭಾಗವಹಿಸಿದ ಶಿಕ್ಷಕರ ಸಂಖ್ಯೆ 65. ಒಟ್ಟು ಖರ್ಚಾದ ಹಣ ರೂ. 36,523/–
5. **ಜಗದ್ಗುರು ಗುರುಬಸವೇಶ್ವರ ಸಂಸ್ಕೃತ ಪಾಠಶಾಲೆ,** ಬೆಕ್ಕಿನಕಲ್ಮಠ, ಆನಂದಪುರ; 2011ರ ಜುಲೈ 1, 2 ಹಾಗೂ 3ರಂದು ನಡೆದ ಶಿಬಿರದಲ್ಲಿ ಭಾಗವಹಿಸಿದ ಶಿಕ್ಷಕರ ಸಂಖ್ಯೆ 65. ಒಟ್ಟು ಖರ್ಚಾದ ಹಣ ರೂ. 46,000/–
6. **ಶ್ರೀ ಜಗದ್ಗುರು ರೇವಣಸಿದ್ದೇಶ್ವರ ಸಂಸ್ಕೃತ ಪಾಠಶಾಲೆ,** ಬಾಳೆಹೊನ್ನೂರು; 2011ರ ಆಗಸ್ಟ್ 10, 11 ಹಾಗೂ 12ರಂದು ನಡೆದ ಶಿಬಿರದಲ್ಲಿ ಭಾಗವಹಿಸಿದ ಶಿಕ್ಷಕರ ಸಂಖ್ಯೆ 43. ಒಟ್ಟು ಖರ್ಚಾದ ಹಣ ರೂ. 42,595/–
7. **ಗುರುಶಾಂತವೀರೇಶ್ವರ ಸಂಸ್ಕೃತ ಪಾಠಶಾಲೆ,** ಸಿಂಧಗಿ, ಹಾವೇರಿ ಜಿಲ್ಲೆ; 2011ರ ನವೆಂಬರ್ 2, 3 ಹಾಗೂ 4ರಂದು ನಡೆದ ಶಿಬಿರದಲ್ಲಿ ಭಾಗವಹಿಸಿದ ಶಿಕ್ಷಕರ ಸಂಖ್ಯೆ 113. ಒಟ್ಟು ಖರ್ಚಾದ ಹಣ ರೂ. 65,453/–

ನಿರ್ಣಯ: **ರಾಜ್ಯದ ನಾನಾ ಭಾಗಗಳಲ್ಲಿ ನಡೆದ ಪುನಶ್ಚೇತನ ಶಿಬಿರಗಳ ವಿವರಗಳನ್ನು ಸಭೆಯು ಗಮನಿಸಿತು. ಭಾಗವಹಿಸಿದ ಶಿಕ್ಷಕರ ವಿವರಗಳನ್ನು ಪರಿಶೀಲಿಸಿತು. ಆಯಾಯ ಭಾಗಗಳಲ್ಲಿ ನಡೆದ ಪುನಶ್ಚೇತನ ಶಿಬಿರಕ್ಕೆ ತಗುಲಿದ ವೆಚ್ಚಗಳಿಗೆ ಸಭೆಯು ಘಟನೋತ್ತರ ಅನುಮೋದನೆಯನ್ನು ನೀಡಿತು.**

**ವಿಷಯ 6: ಸಂಸ್ಕೃತ ಪಾಠಶಾಲೆಗಳ ವಲಯವಾರು ಸಂಯೋಜಕರ ನಿಯೋಜನೆ ಮಾಡಿಕೊಂಡಿರುವ ಬಗೆಗೆ ಘಟನೋತ್ತರ ಅನುಮೋದನೆ ಬಗೆಗೆ.**

ಟಿಪ್ಪಣಿ: ಸಂಸ್ಕೃತ ಶಿಕ್ಷಣ ನಿರ್ದೇಶನಾಲಯದ ಅಡಿಯಲ್ಲಿ 351 ಪಾಠಶಾಲೆಗಳ ಆಡಳಿತಾತ್ಮಕ ಹಾಗೂ ಶೈಕ್ಷಣಿಕ ನಿರ್ವಹಣೆಯನ್ನು ನಿರ್ವಹಿಸುವ ಸೌಕರ್ಯದ ದೃಷ್ಟಿಯಿಂದ 4 ವಲಯಗಳನ್ನು ರಚಿಸಿ ಅವುಗಳಲ್ಲಿ ಈ ಕೆಳಕಂಡಂತೆ ಪಾಠಶಾಲೆಗಳನ್ನು ವಿಂಗಡಿಸಲಾಯಿತು.

| | |
|---|---|
| ಮೈಸೂರು ವಲಯ: 95 ಪಾಠಶಾಲೆಗಳು | ಧಾರವಾಡ ವಲಯ: 95 ಪಾಠಶಾಲೆಗಳು |
| ಬೆಂಗಳೂರು ವಲಯ: 96 ಪಾಠಶಾಲೆಗಳು | ಚಿತ್ರದುರ್ಗ ವಲಯ: 65 ಪಾಠಶಾಲೆಗಳು |

ಈ ಎಲ್ಲಾ ಪಾಠಶಾಲೆಗಳ ನಿರ್ವಹಣಾ ಸೌಕರ್ಯದ ದೃಷ್ಟಿಯಿಂದ ಪ್ರತಿಯೊಂದು ವಲಯದಲ್ಲಿ ಒಬ್ಬ ಅಧ್ಯಾಪಕರನ್ನು ವಲಯ ಸಂಯೋಜಕರೆಂದು ನಿಯಮಿಸಲಾಯಿತು. ಈ ಕೆಳಕಂಡ ಸಹಶಿಕ್ಷಕರು ತಮ್ಮ ಹುದ್ದೆಯಲ್ಲೇ ಇದ್ದು ಆಡಳಿತಾತ್ಮಕ ದೃಷ್ಟಿಯಿಂದ ಈ ಕೆಳಕಂಡ ಪದನಾಮವನ್ನು ಹೊಂದಿರುತ್ತಾರೆ. ಇವರಿಗೆ ಪ್ರತ್ಯೇಕವಾದ ಅಧಿಕಾರ ಮತ್ತು ಯಾವುದೇ ಆರ್ಥಿಕ ಸೌಲಭ್ಯಗಳಿರುವುದಿಲ್ಲ. ಇವರು ನಿರ್ದೇಶನಾಲಯದ ಸೂಚನೆಯಂತೆ ಕೇವಲ ಸಂಪರ್ಕ ಮಾಧ್ಯಮವಾಗಿ ಕಾರ್ಯನಿರ್ವಹಿಸುತ್ತಿರುತ್ತಾರೆ.

| | | |
|---|---|---|
| ಮೈಸೂರು ವಲಯ: | ಸಂಯೋಜಕರು | ವಿದ್ವಾನ್ ಎಂ. ಶಿವಮೂರ್ತಿ |
| ಧಾರವಾಡ ವಲಯ: | ಸಂಯೋಜಕರು | ವಿದ್ವಾನ್ ಎಸ್.ಡಿ. ಕರಾಡೆ |
| ಬೆಂಗಳೂರು ವಲಯ: | ಸಂಯೋಜಕರು | ವಿದ್ವಾನ್ ಸಿ.ಎನ್. ಚಂದ್ರಶೇಖರಯ್ಯ |
| ಚಿತ್ರದುರ್ಗ ವಲಯ: | ಸಂಯೋಜಕರು | ವಿದ್ವಾನ್ ಗಣಪತಿ ಶಾಸ್ತ್ರಿ |

ನಿರ್ಣಯ: **ಮೇಲ್ಕಂಡ ವಿಷಯಗಳನ್ನು ಸಭೆಯು ಪರಿಶೀಲಿಸಿ ವಲಯ ಹಾಗೂ ಸಂಯೋಜಕರ ನೇಮಕಾತಿಗೆ ಸಭೆಯು ತನ್ನ ಅನುಮೋದನೆಯನ್ನು ನೀಡಿತು.**

**ವಿಷಯ 7: ವಿವಿಧ ಕಾರಣಗಳಿಂದ ಆರಂಭಗೊಂಡು ನಿಂತುಹೋಗಿದ್ದ ಪಾಠಶಾಲೆಗಳ ಪುನರಾರಂಭ ಮತ್ತು ಮಾನ್ಯತೆ ನೀಡಿರುವ ಬಗೆಗೆ ಘಟನೋತ್ತರ ಅನುಮೋದನೆ.**

ಟಿಪ್ಪಣಿ: ವಿವಿಧ ಕಾರಣಗಳಿಂದ ನಿಂತುಹೋಗಿದ್ದ ಅನುದಾನರಹಿತ ಸಂಸ್ಕೃತ ಪಾಠಶಾಲೆಗಳನ್ನು ಪುನರಾರಂಭಿಸಲಾಗಿದೆ. ಮೈಸೂರು ವಲಯ: 16; ಬೆಂಗಳೂರು ವಲಯ: 3. ಒಟ್ಟು 19 ಪಾಠಶಾಲೆಗಳ ಪುನಾರಂಭಕ್ಕೆ ಅನುಮೋದನೆಯನ್ನು ಪ್ರಶಿಕ್ಷಣ ಪರಿಷತ್ತಿನ ಸದಸ್ಯರ ಪರಿಶೀಲನ ವರದಿಗಳ ಆಧಾರದ ಮೇಲೆ ಮಾನ್ಯತೆಯನ್ನು ನೀಡಲಾಗಿದೆ.

ನಿರ್ಣಯ: **ಮೇಲ್ಕಂಡ ವಿಷಯಕ್ಕೆ ಸಭೆಯು ತನ್ನ ಅನುಮೋದನೆಯನ್ನು ನೀಡಿತು.**

**ವಿಷಯ 8: ವಿದ್ವಾನ್ ಡಾ. ಎಚ್.ವಿ. ನಾಗರಾಜರಾವ್ ಅವರನ್ನು ಗೌರವ ಸಂದರ್ಶಕ ಪ್ರಾಧ್ಯಾಪಕರನ್ನಾಗಿ ನೇಮಿಸಿಕೊಂಡಿರುವುದರ ಬಗೆಗೆ ಘಟನೋತ್ತರ ಅನುಮೋದನೆ.**

ಟಿಪ್ಪಣಿ: ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು ಅಸ್ತಿತ್ವಕ್ಕೆ ಬಂದ ಮೇಲೆ 21 ಸಂಸ್ಕೃತ ಕಾಲೇಜುಗಳನ್ನು ಸಂಲಗ್ನತೆಗೊಳಿಸಿಕೊಂಡಿದೆ. ವಿವಿಧ ಬಗೆಯ ಯೋಜನೆಗಳನ್ನು ವಿಶ್ವವಿದ್ಯಾಲಯ ಮತ್ತು ಕಾಲೇಜುಗಳಲ್ಲಿ ಹಾಕಿಕೊಂಡಿದೆ. ಈ ಸಂಬಂಧವಾಗಿ

ಹಲವಾರು ಕಾರ್ಯಾಗಾರ, ವಿಶೇಷೋಪನ್ಯಾಸ, ವಿಚಾರಸಂಕಿರಣ ಮತ್ತು ವಿದ್ವತ್ ಶಾಸ್ತ್ರಗೋಷ್ಠಿಗಳನ್ನು ಆಯಾ ಕಾಲೇಜುಗಳಲ್ಲಿ ಈ ಶೈಕ್ಷಣಿಕ ವರ್ಷದಲ್ಲಿ ಹಮ್ಮಿಕೊಳ್ಳಲು ಉದ್ದೇಶಿಸಿದೆ. ಪ್ರತಿಯೊಂದು ಸಂಸ್ಕೃತ ಕಾಲೇಜುಗಳಲ್ಲೂ ಶಾಸ್ತ್ರವಿಷಯವಾಗಿ ವಿಶೇಷೋಪನ್ಯಾಸಗಳನ್ನು ಏರ್ಪಡಿಸಬೇಕಾಗಿದೆ. ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಅಧಿಸೂಚನೆಯ ಪ್ರಕರಣ 13–4(ಎ)ರಲ್ಲಿ ದತ್ತವಾದ ಅಧಿಕಾರದಂತೆ ಮತ್ತು ಅಂಶ 7ರಲ್ಲಿ ನಿಹಿತವಾದ ಅಧಿಕಾರದಂತೆ ಹಾಗೂ ಅಧ್ಯಾಯ 10ರ 69ನೇ ಪ್ರಕರಣದ 5ನೇ ಅಂಶದಲ್ಲಿನ ಅಧಿಕಾರ ಹಾಗೂ ಕರ್ತವ್ಯಗಳ ಅನ್ವಯ ಕುಲಪತಿಗಳು ಅಂಕಿತಗೊಳಿಸಿದ್ದಾರೆ. ಅಂತಾರಾಷ್ಟ್ರೀಯ ಸ್ತರದ ಪ್ರಾಧ್ಯಾಪಕರೂ ಕನ್ನಡ–ಸಂಸ್ಕೃತ ಭಾಷಾತಜ್ಞರೂ ಆದ ಡಾ. ಎಚ್.ವಿ. ನಾಗರಾಜರಾವ್ ಅವರನ್ನು ಪ್ರತಿ ತಿಂಗಳು ಕಾಲೇಜುಗಳಲ್ಲಿ ವಿಶೇಷೋಪನ್ಯಾಸ ನೀಡುವುದು ಮತ್ತು ವಿಶೇಷ ಅನುವಾದ ಯೋಜನೆಯೊಂದನ್ನು ಪೂರೈಸುವಿಕೆಗೆ ಒಳಪಟ್ಟು ಒಂದು ವರ್ಷದ ಅವಧಿಗೆ ಗೌರವ ಸಂದರ್ಶಕ ಪ್ರಾಧ್ಯಾಪಕರನ್ನಾಗಿ ನೇಮಿಸಿಕೊಂಡಿದೆ. ಇವರಿಗೆ ಪ್ರತಿ ತಿಂಗಳು ರೂ. 15,000/–ಗಳನ್ನು ಗೌರವ ಸಂಭಾವನೆಯಾಗಿ ನೀಡಲಾಗುತ್ತಿದೆ.

ನಿರ್ಣಯ: **ವಿಶ್ವವಿದ್ಯಾಲಯದ ಬೌದ್ಧಿಕ ವಿಸ್ತರಣೆಯ ಅಂಗವಾಗಿ ಕೈಗೊಂಡಿರುವ ಗೌರವ ಸಂದರ್ಶಕ ಪ್ರಾಧ್ಯಾಪಕರ ನೇಮಕಾತಿ ಹಾಗೂ ಗೌರವ ಸಂಭಾವನೆಗೆ ಸಭೆಯು ಮೆಚ್ಚುಗೆ ಸೂಚಿಸಿ ತನ್ನ ಅನುಮೋದನೆಯನ್ನು ನೀಡಿತು.**

**ವಿಷಯ 9: ಘಟಕ ಕಾಲೇಜುಗಳಲ್ಲಿ ಇಂಗ್ಲಿಷ್ ಮತ್ತು ಕನ್ನಡಕ್ಕೆ ಅರೆಕಾಲಿಕ ಅತಿಥಿ ಉಪನ್ಯಾಸಕರನ್ನು ತಾತ್ಕಾಲಿಕವಾಗಿ ನೇಮಕ ಮಾಡಿಕೊಂಡಿರುವ ಬಗೆಗೆ ಘಟನೋತ್ತರ ಅನುಮೋದನೆ.**

ಟಿಪ್ಪಣಿ: ಘಟಕ ಕಾಲೇಜುಗಳಾದ ಶ್ರೀ ಚಾಮರಾಜೇಂದ್ರ ಸಂಸ್ಕೃತ ಕಾಲೇಜು, ಚಾಮರಾಜಪೇಟೆ, ಬೆಂಗಳೂರು ಮತ್ತು ಶ್ರೀಮನ್ಮಹಾರಾಜ ಸರ್ಕಾರಿ ಸಂಸ್ಕೃತ ಕಾಲೇಜು, ನ್ಯೂ ಸಯ್ಯಾಜಿರಾವ್ ರಸ್ತೆ, ಮೈಸೂರು ಈ ಎರಡೂ ಕಾಲೇಜುಗಳ ಮುಖ್ಯಸ್ಥರು ವಿಶ್ವವಿದ್ಯಾಲಯಕ್ಕೆ ಪತ್ರ ಬರೆದು ಕನ್ನಡ ಮತ್ತು ಇಂಗ್ಲಿಷ್ ವಿಷಯಗಳನ್ನು ಬೋಧಿಸಲು ಅರೆಕಾಲಿಕ ಉಪನ್ಯಾಸಕರನ್ನು ನೇಮಕ ಮಾಡುವಂತೆ ಕೋರಿರುತ್ತಾರೆ. ಈ ಹಿನ್ನೆಲೆಯಲ್ಲಿ ಪತ್ರಿಕೆಗಳಲ್ಲಿ ಪ್ರಕಟಣೆ ನೀಡಿ ಅರ್ಜಿಗಳನ್ನು ಆಹ್ವಾನಿಸಲಾಗಿತ್ತು. ನಂತರ ಆಯ್ಕೆ ಉಪಸಮಿತಿಯನ್ನು ರಚಿಸಿ, ಸಂದರ್ಶನದ ಮೂಲಕ ಈ ಎರಡೂ ಕಾಲೇಜುಗಳಿಗೆ ಕನ್ನಡ ಮತ್ತು ಇಂಗ್ಲಿಷ್ ವಿಷಯಗಳಿಗೆ ಮಾತ್ರ ಅರೆಕಾಲಿಕ ಉಪನ್ಯಾಸಕರನ್ನು ನೇಮಿಸಲಾಗಿದೆ.

ನಿರ್ಣಯ: **ಘಟಕ ಕಾಲೇಜುಗಳ ಸೂಕ್ತ ಶೈಕ್ಷಣಿಕ ನಿರ್ವಹಣೆಗಾಗಿ ಕೈಗೊಳ್ಳಲಾಗಿರುವ ಅರೆಕಾಲಿಕ ಅತಿಥಿ ಉಪನ್ಯಾಸಕರ ತಾತ್ಕಾಲಿಕ ನೇಮಕಾತಿಗೆ ಸಭೆಯು ತನ್ನ ಅನುಮೋದನೆಯನ್ನು ನೀಡಿತು.**

**ವಿಷಯ 10: ವಿಶ್ವವಿದ್ಯಾಲಯಕ್ಕೆ ಭದ್ರತಾಪಡೆಯನ್ನು ನೇಮಿಸಿಕೊಂಡಿರುವ ಬಗೆಗೆ ಘಟನೋತ್ತರ ಅನುಮೋದನೆ.**

ಟಿಪ್ಪಣಿ: ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು 2010–11ನೇ ಸಾಲಿನ ಸಂಸ್ಕೃತ ಪ್ರಸಿದ್ಧ ಪರೀಕ್ಷೆಗಳನ್ನು ನಡೆಸಿದ್ದು, ಅವುಗಳಿಗೆ ಸಂಬಂಧಪಟ್ಟ ದಾಖಲೆಗಳನ್ನು ಹಾಗೂ ಸಾರ್ವಜನಿಕ ಶಿಕ್ಷಣ ಇಲಾಖೆಯಿಂದ ಪಡೆದುಕೊಂಡಿರುವ ಈ ಹಿಂದಿನ ಸಾಲಿನ ಪರೀಕ್ಷೆಗಳಿಗೆ ಸಂಬಂಧಪಟ್ಟ ದಾಖಲೆಗಳನ್ನು ಸಂರಕ್ಷಿಸುವುದು ಅಗತ್ಯವಾಗಿದ್ದು ಮತ್ತು ವಿಶ್ವವಿದ್ಯಾಲಯದ ಆವರಣದ ರಕ್ಷಣೆಗಾಗಿ ನಿಯಮಾನುಸಾರ ಭದ್ರತಾ ಸಿಬ್ಬಂದಿಯನ್ನು ನೇಮಿಸಿಕೊಳ್ಳಲಾಗಿದೆ.

ನಿರ್ಣಯ: **ವಿಶ್ವವಿದ್ಯಾಲಯ ಹಾಗೂ ಘಟಕ ಕಾಲೇಜಿನ ಚರಾಸ್ತಿಗಳಿಗೆ ಸಂರಕ್ಷಣೆ ಒದಗಿಸುವ ಹಾಗೂ ವಿಶ್ವವಿದ್ಯಾಲಯದ ದೈನಂದಿನ ಚಟುವಟಿಕೆಗಳಿಗೆ ವ್ಯವಸ್ಥಿಕರಣಗೊಳಿಸುವ ಹಿನ್ನೆಲೆಯಲ್ಲಿ ಭದ್ರತಾ ಪಡೆಯನ್ನು ನೇಮಿಸಿಕೊಂಡಿರುವ ಕ್ರಮಕ್ಕೂ ನಿಗದಿಗೊಂಡಿರುವ ಮೊತ್ತಕ್ಕೂ ಸಭೆಯು ತನ್ನ ಅನುಮೋದನೆಯನ್ನು ನೀಡಿತು.**

**ವಿಷಯ 11: ಬೆಂಗಳೂರು ಆಕಾಶವಾಣಿ ಕೇಂದ್ರದಲ್ಲಿ 'ಫೋನ್–ಇನ್' ಕಾರ್ಯಕ್ರಮದಲ್ಲಿ ಕುಲಪತಿಗಳು ಭಾಗವಹಿಸಿದ್ದಕ್ಕಾಗಿ ನೀಡಿದ ಮೊತ್ತಕ್ಕೆ ಘಟನೋತ್ತರ ಅನುಮೋದನೆ.**

ಟಿಪ್ಪಣಿ: ಕುಲಪತಿಗಳು ದಿನಾಂಕ: 18.04.2011ರಂದು ರಾತ್ರಿ 9.30ರಿಂದ 10.30ರ ವರೆಗೆ (ಒಂದು ಗಂಟೆಯ ಕಾಲ) ಬೆಂಗಳೂರಿನ ಆಕಾಶವಾಣಿ ಕೇಂದ್ರದಲ್ಲಿ ರಾಜ್ಯವ್ಯಾಪಿ **'ನೇರ ಫೋನ್–ಇನ್'** ಕಾರ್ಯಕ್ರಮದಲ್ಲಿ ಪಾಲ್ಗೊಂಡು ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಕಾರ್ಯೋದ್ದೇಶಗಳ ಬಗೆಗೆ ರಾಜ್ಯದ ಜನತೆಗೆ ಪರಿಚಯವನ್ನು ಮಾಡಿಕೊಟ್ಟರು. ಈ ಕಾರ್ಯಕ್ರಮದ ಪ್ರಸಾರಕ್ಕಾಗಿ ರೂ. 90,468/–ಗಳನ್ನು ಆಕಾವಾಣಿ ಬೆಂಗಳೂರು ಕೇಂದ್ರಕ್ಕೆ ಪಾವತಿ ಮಾಡಲಾಗಿದೆ.

ನಿರ್ಣಯ: **ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಕಾರ್ಯಕ್ರಮದ ಪ್ರಸಾರಕ್ಕೆ ತಗುಲಿರುವ ಒಟ್ಟು ಮೊತ್ತಕ್ಕೆ ಸಭೆಯು ತನ್ನ ಅನುಮೋದನೆಯನ್ನು ನೀಡಿತು.**

**ವಿಷಯ 12: ವಿಶ್ವವಿದ್ಯಾಲಯಕ್ಕೆ ಕಾನೂನು ಸಲಹೆಗಾರರಾಗಿ ಶ್ರೀ ಸಿ. ವೆಂಕಟೇಶ್ –ಇವರನ್ನು ನೇಮಕ ಮಾಡಿಕೊಂಡಿರುವುದಕ್ಕೆ ಘಟನೋತ್ತರ ಅನುಮೋದನೆ.**

ಟಿಪ್ಪಣಿ: ಈ ಮೊದಲು ಸಾರ್ವಜನಿಕ ಶಿಕ್ಷಣ ಇಲಾಖೆಯ ವ್ಯಾಪ್ತಿಯಲ್ಲಿದ್ದ ಸಂಸ್ಕೃತ ಕಾಲೇಜುಗಳು ಮತ್ತು ಸಂಸ್ಕೃತ ಪಾಠಶಾಲೆಗಳಿಗೆ ಸಂಬಂಧಪಟ್ಟ ಕಡತಗಳನ್ನು ವಿಶ್ವವಿದ್ಯಾಲಯಕ್ಕೆ ಹಸ್ತಾಂತರಿಸಲಾಗಿದ್ದು, ಈ ಹಿಂದೆ ಸರ್ಕಾರದ ಹಂತದಲ್ಲಿ ನೆನೆಗುದಿಗೆ ಬಿದ್ದಿರುವ ಅನೇಕ ಕಾಲೇಜುಗಳು ಮತ್ತು ಪಾಠಶಾಲೆಗಳಿಗೆ ಸಂಬಂಧಿಸಿದಂತೆ ನ್ಯಾಯಾಲಯದಲ್ಲಿರುವ ಪ್ರಕರಣಗಳನ್ನು ಬಗೆಹರಿಸಿಕೊಳ್ಳಬೇಕಾಗಿದ್ದು, ಕಾನೂನು ಸಲಹೆಗಳನ್ನು ಪಡೆದುಕೊಂಡು ಮುಂದಿನ ಕ್ರಮಕೈಗೊಳ್ಳಬೇಕಾಗಿರುತ್ತದೆ. ಈ ಹಿನ್ನೆಲೆಯಲ್ಲಿ ವಿಶ್ವವಿದ್ಯಾಲಯದ ಕಾನೂನು ಸಲಹೆಗಾರರನ್ನಾಗಿ ವಕೀಲರಾದ ಶ್ರೀ ಸಿ. ವೆಂಕಟೇಶ್ ಅವರನ್ನು ನೇಮಕ ಮಾಡಿಕೊಳ್ಳಲಾಗಿದೆ. ಇವರಿಗೆ ಪ್ರತೀ ತಿಂಗಳು ರೂ. 3,500/–ಗಳನ್ನು ಗೌರವ ಸಂಭಾವನೆಯನ್ನು ಪಾವತಿಸಲಾಗುತ್ತಿದೆ.

ಉಳಿದಂತೆ ಬೇರೆ ಪ್ರಕರಣಗಳಲ್ಲಿ ವಿಶ್ವವಿದ್ಯಾಲಯದ ಪರವಾಗಿ ಕಾರ್ಯನಿರ್ವಹಿಸಲು ಆಯಾ ಪ್ರಕರಣಗಳಿಗೆ ಪ್ರತ್ಯೇಕವಾಗಿ ಬಿಲ್ಲನ್ನು ಪಾವತಿಸಲಾಗುತ್ತಿದೆ.

ನಿರ್ಣಯ: **ವಿಶ್ವವಿದ್ಯಾಲಯದ ಅಧೀನದಲ್ಲಿರುವ ಘಟಕ ಕಾಲೇಜು, ಸಂಲಗ್ನಗೊಂಡಿರುವ ಕಾಲೇಜು ಹಾಗೂ ಎಲ್ಲಾ ಪಾಠಶಾಲೆಗಳಿಗೆ ಸಂಬಂಧಿಸಿದಂತೆ ನ್ಯಾಯಾಲಯದಲ್ಲಿರುವ ಪ್ರಕರಣಗಳನ್ನು ಬಗೆಹರಿಸುವ ಉದ್ದೇಶದಿಂದ ಹಾಗೂ ಭವಿಷ್ಯದಲ್ಲಿ ಉಂಟಾಗಬಹುದಾದ ಕಾನೂನು ತೊಡಕಿಗೆ ಸೂಕ್ತ ರೀತಿಯಿಂದ ಕಾನೂನು ಸಲಹೆಗಾರರಾಗಿ ಶ್ರೀ ಸಿ. ವೆಂಕಟೇಶ್ ಅವರನ್ನು ಮಾನ್ಯ ಕುಲಪತಿಗಳ ಅನುಮೋದನೆಯ ಮೇರೆಗೆ ನೇಮಿಸಿಕೊಳ್ಳಲಾಗಿದೆ. ಈ ಬಗೆಗೆ ಸಭೆಯು ತನ್ನ ಅನುಮೋದನೆಯನ್ನು ನೀಡಿತು. ಇವರಿಗೆ ಪ್ರತಿ ತಿಂಗಳು ಕೊಡುವ ಗೌರವ ಸಂಭಾವನೆಗೂ ಒಪ್ಪಿಗೆಯನ್ನು ನೀಡಿತು.**

**ವಿಷಯ 13: 2010–11ನೇ ಸಾಲಿನಲ್ಲಿ ಸಂಸ್ಕೃತ ಪ್ರಸಿದ್ಧ ಪರೀಕ್ಷೆಗಳಿಗೆ ಸಂಬಂಧಿಸಿದಂತೆ ಆಗಿರುವ ವೆಚ್ಚಕ್ಕೆ ಘಟನೋತ್ತರ ಅನುಮೋದನೆ ಬಗೆಗೆ.**

ಟಿಪ್ಪಣಿ: ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವನ್ನು ಸ್ಥಾಪಿಸಿ ರಾಜ್ಯದ ಸಂಸ್ಕೃತ ಕಾಲೇಜುಗಳು ಮತ್ತು ಸಂಸ್ಕೃತ ಪಾಠಶಾಲೆಗಳನ್ನು ವಿಶ್ವವಿದ್ಯಾಲಯಕ್ಕೆ ವರ್ಗಾಯಿಸಲಾಗಿದೆ. ಈ ಹಿನ್ನೆಲೆಯಲ್ಲಿ ಈ ಹಿಂದೆ ಸಾರ್ವಜನಿಕ ಶಿಕ್ಷಣ ಇಲಾಖೆಯವರು ನಡೆಸುತ್ತಿದ್ದ ಸಂಸ್ಕೃತ/ವೇದ ಪ್ರಸಿದ್ಧ ಪರೀಕ್ಷೆಗಳನ್ನು (ಸಂಸ್ಕೃತ ಪ್ರಥಮಾ, ಕಾವ್ಯ, ಸಾಹಿತ್ಯ, ವಿದ್ವನ್ಮಧ್ಯಮಾ ಮತ್ತು ವಿದ್ವದುತ್ತಮಾ ಹಾಗೂ ವೇದ ಪ್ರಥಮಾ, ಪ್ರವೇಶ, ಮೂಲ, ವಿದ್ವನ್ಮಧ್ಯಮಾ ಮತ್ತು ವಿದ್ವದುತ್ತಮಾ ಪರೀಕ್ಷೆಗಳು) 2010–11ನೇ ಸಾಲಿನಲ್ಲಿ ವಿಶ್ವವಿದ್ಯಾಲಯವು ನಡೆಸಿತು. ಪರೀಕ್ಷಾ ಕಾರ್ಯಗಳಿಗೆ ಸಂಬಂಧಿಸಿದಂತೆ ಮಾಡಲಾದ ಖರ್ಚು–ವೆಚ್ಚಗಳು ಈ ಕೆಳಕಂಡಂತಿವೆ:

| | | |
|---|---|---|
| 1. | 2010–11ನೇ ಸಾಲಿನ ಪ್ರಸಿದ್ಧ ಪರೀಕ್ಷೆಗಳ ಅರ್ಜಿಗಳ ಮುದ್ರಣ | 5,775.00 |
| 2. | ಉತ್ತರಪತ್ರಿಕೆ ಹಾಗೂ ಪುರವಣಿಗಳ ಮುದ್ರಣ | 61,294.00 |
| 3. | ಪ್ರಥಮಾ ಪ್ರಶ್ನೆಪತ್ರಿಕೆಗಳ ಬುಕ್‌ಲೆಟ್‌ಗಳ ಮುದ್ರಣ | 84,000.00 |
| 4. | ಕಾವ್ಯ, ಸಾಹಿತ್ಯ ಪ್ರಶ್ನೆಪತ್ರಿಕೆಗಳ ಬುಕ್‌ಲೆಟ್‌ಗಳ ಮುದ್ರಣ | 59,325.00 |
| 5. | ಲೇಖನ ಸಾಮಗ್ರಿಗಳನ್ನು ಪರೀಕ್ಷಾ ಕೇಂದ್ರಗಳಿಗೆ ತಲುಪಿಸಲು ತೆರಳಿದ ಅಧಿಕಾರಿ /ಸಿಬ್ಬಂದಿಗಳ ಸಂಭಾವನೆ | 41,600.00 |
| 6. | 2011ರ ಸಂಸ್ಕೃತ ವಿದ್ವನ್ಮಧ್ಯಮಾ ಮತ್ತು ವಿದ್ವದುತ್ತಮಾ ಮೌಲ್ಯಮಾಪಕರ ಸಂಭಾವನೆ | 84,000.00 |
| 7. | ಸಿಬ್ಬಂದಿಗಳ ಉಪವೇತನ ಹುಂಡಿ ಅರ್ಜಿಗಳ ಮುದ್ರಣ | 99,750.00 |
| 8. | ಪ್ರಥಮಾ, ಕಾವ್ಯ ಮತ್ತು ಸಾಹಿತ್ಯ ಫಲಿತಾಂಶವನ್ನು ಗಣಕಯಂತ್ರದಲ್ಲಿ ಅಳವಡಿಸಿರುವುದು | 99,765.00 |
| 9. | ವೇದ/ಸಂಸ್ಕೃತ ಪ್ರಥಮಾ, ಕಾವ್ಯ ಮತ್ತು ಸಾಹಿತ್ಯ ತರಗತಿಗಳ ಅಂಕಪಟ್ಟಿಗಳ ಮುದ್ರಣ | 99,960.00 |
| 10. | ಪ್ರಮಾಣಪತ್ರಗಳಿಗೆ ವಿಶ್ವವಿದ್ಯಾಲಯದ ಲೋಗೊ ಹಾಟ್ ಫಾಯಿಲ್ ಮುದ್ರಣ | 33,600.00 |
| 11. | ಪ್ರಥಮಾ, ಕಾವ್ಯ ಮತ್ತು ಸಾಹಿತ್ಯ ತರಗತಿಗಳ ಫಲಿತಾಂಶ ಪಟ್ಟಿ ಮುದ್ರಣ | 86,446.00 |
| 12. | ವಾಹನಗಳ ಬಾಡಿಗೆ ಬಾಬ್ತು | 99,410.00 |
| 13. | ವಿದ್ವನ್ಮಧ್ಯಮಾ ಮತ್ತು ವಿದ್ವದುತ್ತಮಾ ಅಂಕಪಟ್ಟಿಗಳ ಮುದ್ರಣದ ಬಾಬ್ತು | 6,247.00 |
| 14. | ವಿದ್ವನ್ಮಧ್ಯಮಾ ಮತ್ತು ವಿದ್ವದುತ್ತಮಾ ಅಂಕಪಟ್ಟಿಗಳಿಗೆ ವಿಶ್ವವಿದ್ಯಾಲಯದ ಲೋಗೊ ಹಾಟ್ ಫಾಯಿಲ್ ಮುದ್ರಣದ ಬಾಬ್ತು | 2,100.00 |
| 15. | ವಿದ್ಯಾರ್ಥಿಗಳ ನಾಮಾಂಕಿತ ಪಟ್ಟಿಯನ್ನು ಗಣಕಯಂತ್ರದಲ್ಲಿ ಅಳವಡಿಸಿದ ಬಾಬ್ತು | 99,009.00 |
| 16. | ಹನ್ನೆರಡು ಪುಟಗಳ ಉತ್ತರಪತ್ರಿಕೆಗಳ ಮುದ್ರಣದ ಬಾಬ್ತು | 85,260.00 |
| 17. | ಸಂಸ್ಕೃತ ಪ್ರಸಿದ್ಧ ಪರೀಕ್ಷೆಗಳ ಅರ್ಜಿಗಳ ಮುದ್ರಣದ ಬಾಬ್ತು | 20,475.00 |
| 18. | ಪ್ರಶ್ನೆಪತ್ರಿಕೆ ಮತ್ತು ಉತ್ತರಪತ್ರಿಕೆಗಳನ್ನು ಪ್ಯಾಕ್ ಮಾಡಿದ ಬಾಬ್ತು | 84,000.00 |
| 19. | ಉತ್ತರಪತ್ರಿಕೆಗಳ ಮೌಲ್ಯಮಾಪನ ಹಾಜರಾತಿ ಅಂಕಪಟ್ಟಿ ನಮೂನೆ ಮುದ್ರಿಸಿದ ಬಾಬ್ತು | 42,000.00 |
| 20. | ಪ್ರಶ್ನೆಪತ್ರಿಕೆ ಮತ್ತು ಉತ್ತರ ಪತ್ರಿಕೆಗಳನ್ನು ಪ್ಯಾಕ್ ಮಾಡಿದ ಬಾಬ್ತು | 10,799.00 |
| 21. | ಪ್ರಶ್ನೆಪತ್ರಿಕೆಗಳ ಡಿ.ಟಿ.ಪಿ. ಹಾಗೂ ಅರ್ಜಿ ಮುದ್ರಣ ಬಾಬ್ತು | 20,611.00 |
| 22. | ವಿಚಕ್ಷಕ ದಳ | 52,332.00 |
| 23. | ಸಂಸ್ಕೃತ ಪ್ರಸಿದ್ಧ ಪರೀಕ್ಷೆಗಳ ಮೌಲ್ಯಮಾಪನ ಕಾರ್ಯದ ಬಾಬ್ತು | 5,56,550.00 |
| 24. | ಮೌಲ್ಯಮಾಪನ ಅರ್ಜಿ ನಮೂನೆಗಳ ಮುದ್ರಣ ಬಾಬ್ತು | 10,815.00 |
| 25. | ಸಾಹಿತ್ಯ ಪತ್ರಿಕೆ ಮೌಲ್ಯಮಾಪನದ ಸಂಭಾವನೆ | 54,000.00 |
| 26. | ಡಿ–ಕೋಡಿಂಗ್ ಸ್ಟಿಕ್ಕರ್ ಮುದ್ರಣದ ಬಾಬ್ತು | 17,000.00 |
| 27. | ಹನ್ನೆರಡು ಪುಟಗಳ ಬುಕ್‌ಲೆಟ್ ಮುದ್ರಣದ ಬಾಬ್ತು | 9,473.00 |

| | | |
|---|---|---|
| 28. | ವಿದ್ವನ್ಮಧ್ಯಮಾ ಮತ್ತು ವಿದ್ವದುತ್ತಮಾ ಫಲಿತಾಂಶವನ್ನು ಗಣಕಯಂತ್ರದಲ್ಲಿ ಅಳವಡಿಸಿದ ಬಾಬ್ತು | 3,385.00 |
| 29. | ಕ್ರಾಫ್ಟ್ ಲಕೋಟೆ ಮುದ್ರಣದ ಬಾಬ್ತು | 37,800.00 |
| 30. | ಪ್ರಸಿದ್ಧ ಪರೀಕ್ಷೆಗಳ ವಿದ್ಯಾರ್ಥಿಗಳ ಪ್ರವೇಶಪತ್ರ ಮುದ್ರಣದ ಬಾಬ್ತು | 99,765.00 |
| 31. | ಪರೀಕ್ಷಾ ಕೇಂದ್ರಗಳ ಸಾದಿಲ್ವಾರು ವೆಚ್ಚ | 94,548.00 |
| 32. | ಇತರೆ | 2,06,662.00 |
| | **ಒಟ್ಟು** | **23,67,756.00** |

ನಿರ್ಣಯ: **ಮೇಲ್ಕಂಡ 2010–11ನೇ ಸಾಲಿನಲ್ಲಿ ನಡೆದ ಪ್ರಥಮಾ, ಕಾವ್ಯ, ಸಾಹಿತ್ಯ, ವಿದ್ವನ್ಮಧ್ಯಮಾ ಮತ್ತು ವಿದ್ವದುತ್ತಮಾ ಪ್ರಸಿದ್ಧ ಪರೀಕ್ಷೆಗಳಿಗೆ ತಗುಲಿದ ಒಟ್ಟು ವೆಚ್ಚ ರೂ. 23,67,756/– ಗಳಿಗೆ ಸಭೆಯು ತನ್ನ ಅನುಮೋದನೆಯನ್ನು ನೀಡಿತು.**

**ವಿಷಯ 14: ತ್ರೈಮಾಸಿಕ–ಷಾಣ್ಮಾಸಿಕ ಪತ್ರಿಕೆಗಳನ್ನು ಪ್ರಕಟಣೆ ಹಾಗೂ ಆದ ವೆಚ್ಚಕ್ಕೆ ಘಟನೋತ್ತರ ಅನುಮೋದನೆ ಬಗೆಗೆ.**

ಟಿಪ್ಪಣಿ: ವಿಶ್ವವಿದ್ಯಾಲಯವು ಅಸ್ತಿತ್ವಕ್ಕೆ ಬಂದ ಮೇಲೆ ವಿಶ್ವವಿದ್ಯಾಲಯದ ಶೈಕ್ಷಣಿಕ ಕಾರ್ಯಚಟುವಟಿಕೆಗಳ ಹಾಗೂ ಇತರೆ ಚಟುವಟಿಕೆಗಳ ಬಗ್ಗೆ ಒಂದು ಮುಖವಾಣಿಯನ್ನು ವಾರ್ತಾಪತ್ರದ ಮುಖಾಂತರ ಪ್ರಕಟಿಸಲು ಸಂಪಾದಕ ಸಲಹಾ ಮಂಡಳಿಯನ್ನು ರಚಿಸಿ, ಈ ಮಂಡಳಿಯ ಮುಖಾಂತರ ಮೂರು ತಿಂಗಳಿಗೊಮ್ಮೆ **'ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯಃ ವಾರ್ತಾಪತ್ರಮ್'** ಪತ್ರಿಕೆಯನ್ನು ಪ್ರಕಟಿಸುತ್ತಿದೆ. ಪತ್ರಿಕೆಯ ಸಂಪಾದಕರಿಗೆ ಒಂದು ಸಂಚಿಕೆಗೆ ರೂ. 5000/–ಗಳನ್ನು ಗೌರವ ಸಂಭಾವನೆಯಾಗಿ ಪಾವತಿಸಲಾಗುತ್ತಿದೆ. ಸಭೆಗಳಿಗೆ ಹಾಗೂ ಮುದ್ರಣಕ್ಕೆ ಸಂಬಂಧಿಸಿದಂತೆ ನಿಯಮಾನುಸಾರ ವೆಚ್ಚವನ್ನು ಪಾವತಿಸಲಾಗಿದೆ. ವಿಶ್ವವಿದ್ಯಾಲಯವು ಸಂಶೋಧನಾ ಲೇಖನಗಳನ್ನು ಪ್ರಕಟಿಸುವ ಸಲುವಾಗಿ ಸಂಪಾದಕೀಯ ಸಲಹಾ ಮಂಡಳಿಯನ್ನು ರಚಿಸಿ, ಈ ಮಂಡಳಿಯ ಮುಖಾಂತರ ಸಂಸ್ಕೃತ/ಇಂಗ್ಲಿಷ್ ಭಾಷೆಯ ಸಂಶೋಧನಾ ಲೇಖನಗಳನ್ನು ಒಳಗೊಂಡ **'ಕರ್ನಾಟಕ ಸಂಸ್ಕೃತಾಧ್ಯಯನಮ್'** ಷಾಣ್ಮಾಸಿಕ ಶೋಧಪತ್ರಿಕೆಯನ್ನು ಪ್ರಕಟಿಸುತ್ತಿದೆ. ಪತ್ರಿಕೆಯ ಸಂಪಾದಕರಿಗೆ ಒಂದು ಸಂಚಿಕೆಗೆ ರೂ. 5000/–ಗಳನ್ನು ಗೌರವ ಸಂಭಾವನೆಯಾಗಿ ಪಾವತಿಸಲಾಗುತ್ತಿದೆ. ಸಭೆಗಳಿಗೆ ಹಾಗೂ ಮುದ್ರಣಕ್ಕೆ ಸಂಬಂಧಿಸಿದಂತೆ ನಿಯಮಾನುಸಾರ ವೆಚ್ಚವನ್ನು ಪಾವತಿಸಲಾಗಿದೆ.

ಈ ಎರಡೂ ಪತ್ರಿಕೆಗಳ ಪ್ರಕಟಣೆಗೆ ಸಂಬಂಧಿಸಿದಂತೆ ತಗಲುವ ವೆಚ್ಚಗಳಿಗೆ ಮಾನ್ಯರ ಅನುಮೋದನೆಗಾಗಿ.

ನಿರ್ಣಯ: **ಮೇಲ್ಕಂಡ ವಿಷಯಗಳನ್ನು ಪರಿಶೀಲಿಸಿ ಸಭೆಯು ಸಂಬಂಧಿಸಿದ ಪ್ರಕ್ರಿಯೆಗಳಿಗೂ ಸಂಪಾದಕರ ಗೌರವ ಸಂಭಾವನೆಗೂ ತನ್ನ ಅನುಮೋದನೆಯನ್ನು ನೀಡಿತು.**

**ವಿಷಯ 15: ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ ಸಂಸ್ಥಾಪನ ಸ್ಮರಣಾರ್ಥ ವಿಶೇಷ ಉಪನ್ಯಾಸ ಮಾಲೆಯನ್ನು ಆರಂಭಿಸಿ ಮೊದಲ ಉಪನ್ಯಾಸ ಏರ್ಪಡಿಸಿದ್ದು, ಆದ ವೆಚ್ಚಕ್ಕೆ ಘಟನೋತ್ತರ ಅನುಮೋದನೆ.**

**ಟಿಪ್ಪಣಿ:** ವಿಶ್ವವಿದ್ಯಾಲಯದ ಸಂಸ್ಥಾಪನ ಸ್ಮರಣಾರ್ಥವಾಗಿ **ಡಾ. ಬನ್ನಂಜೆ ಗೋವಿಂದಾಚಾರ್ಯ** ಅವರ ಉಪನ್ಯಾಸ ಕಾರ್ಯಕ್ರಮವನ್ನು ಸಂಸ್ಥಾಪನಾ ವಿಶೇಷೋಪನ್ಯಾಸ ಮಾಲೆಯ ಶೀರ್ಷಿಕೆಯಲ್ಲಿ ಏರ್ಪಡಿಸಲಾಗಿತ್ತು. ಈ ಉಪನ್ಯಾಸವನ್ನು ಪುಸ್ತಕರೂಪದಲ್ಲಿ ಪ್ರಕಟಿಸಲಾಗಿದೆ. ಕಾರ್ಯಕ್ರಮದಲ್ಲಿ ಉಪನ್ಯಾಸವನ್ನು ನೀಡಿದ ಗೌರವ ಸಂಭಾವನೆಯಾಗಿ ರೂ. 10,000/–ಗಳನ್ನು ಪಾವತಿಸಲಾಗಿದ್ದು, ಉಪನ್ಯಾಸ ಪುಸ್ತಕದ ಮುದ್ರಣದ ವೆಚ್ಚವನ್ನು ನಿಯಮಾನುಸಾರ ದರಪಟ್ಟಿಗಳನ್ನು ಆಹ್ವಾನಿಸಿ ಪಾವತಿಸಲಾಗಿದೆ.

ನಿರ್ಣಯ: **ಮೇಲ್ಕಂಡ ವಿಷಯವನ್ನು ಪರಿಶೀಲಿಸಿದ ಸಭೆಯು ಸಂಸ್ಥಾಪನಾ ಸ್ಮರಣಾರ್ಥ ಉಪನ್ಯಾಸಗಳನ್ನು ಬೇರೆ ಬೇರೆ ಕಾಲೇಜುಗಳಲ್ಲಿ ಸೂಕ್ತ ರೀತಿಯಿಂದ ನಡೆಯುವುದು ಉಚಿತವೆಂದು ತಿಳಿಸಿ, ಮೊದಲ ಉಪನ್ಯಾಸಕ್ಕೆ ತಗುಲಿದ ವೆಚ್ಚಕ್ಕೆ ತನ್ನ ಅನುಮೋದನೆಯನ್ನು ನೀಡಿತು.**

**ವಿಷಯ 16: ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ವೆಬ್‌ಸೈಟ್ ಪ್ರಾರಂಭಿಸಿರುವುದಕ್ಕೆ ಘಟನೋತ್ತರ ಅನುಮೋದನೆ ಬಗೆಗೆ.**

ಟಿಪ್ಪಣಿ: ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಸರ್ವತೋಮುಖಿ ಸಂವಹನದ ದೃಷ್ಟಿಯಿಂದ ವಿಶ್ವವಿದ್ಯಾಲಯಕ್ಕೆ ವೆಬ್‌ಸೈಟ್‌ವೊಂದರ ಅವಶ್ಯಕತೆಯಿದ್ದು, ಈ ಕುರಿತು ಎನ್‌ಐಸಿ, ಬೆಂಗಳೂರು ಕೇಂದ್ರದವರೊಂದಿಗೆ ಚರ್ಚಿಸಿ **'ಐಡಿಯಾಸ್ ಸಾಫ್ಟ್‌ವೇರ್ ಅಂಡ್ ಕನ್ಸಲ್ಟಿಂಗ್, ಚಂದ್ರಾ ಲೇಔಟ್, ಬೆಂಗಳೂರು'** ಇವರಿಗೆ ಕಾಲಮಿತಿಯೊಂದಿಗೆ ಸಂಸ್ಕೃತ–ಆಂಗ್ಲ–ಕನ್ನಡ ಮೂರೂ ಭಾಷೆಗಳಲ್ಲಿ ತಲಾ 80 ಪುಟಗಳಂತೆ ಒಟ್ಟು 240 ಪುಟಗಳ ಮಾಹಿತಿಯನ್ನೊಳಗೊಂಡ ಜಾಲತಾಣವನ್ನು ನಿರ್ಮಿಸಲು ಆದೇಶ ನೀಡಲಾಗಿದೆ.

ನಿರ್ಣಯ: **ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು ಜಾಲತಾಣವನ್ನು ನಿರ್ಮಿಸಿರುವ ಉದ್ದೇಶದ ಬಗೆಗೆ ಸಭೆಯು ತನ್ನ ಮೆಚ್ಚುಗೆಯನ್ನು ಸೂಚಿಸಿ ಇದಕ್ಕೆ ತಗುಲಿರುವ ವೆಚ್ಚಕ್ಕೂ ಪ್ರಕ್ರಿಯೆಗೂ ತನ್ನ ಅನುಮೋದನೆಯನ್ನು ನೀಡಿತು.**

**ವಿಷಯ 17: ಸರ್ಕಾರವು ವಿವಿಧ ಸಂಸ್ಕೃತ ಪಾಠಶಾಲೆಗಳ ಸಹಶಿಕ್ಷಕರ ನೂತನ ಹುದ್ದೆಗಳ ಮಂಜೂರು ಮಾಡಿದ್ದು ಅವುಗಳ ಪ್ರಕ್ರಿಯೆಯ ಬಗೆಗೆ.**

ಟಿಪ್ಪಣಿ: 1. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು ಇವರ ಪತ್ರಸಂಖ್ಯೆ ಇಡಿ 11 ಎಲ್‌ಎಸ್‌ಇ 2010, ದಿನಾಂಕ: 04.10.2010ರ ಪತ್ರದಲ್ಲಿ ಅನುದಾನಿತ ಸಂಸ್ಕೃತ ಪಾಠಶಾಲೆಗಳಲ್ಲಿ ನಿವೃತ್ತಿ, ನಿಧನ ಮತ್ತು ರಾಜೀನಾಮೆಗಳಿಂದ ಖಾಲಿ ಇರುವ 41 ಸಂಸ್ಕೃತ ಶಿಕ್ಷಕರ ಹುದ್ದೆಗಳನ್ನು ಭರ್ತಿ ಮಾಡಲು ಅನುಮತಿ

ನೀಡುವ ಬಗ್ಗೆ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು ರವರಿಗೆ ನಿರ್ದೇಶನ ನೀಡಿರುತ್ತಾರೆ. ಸಂಸ್ಕೃತ ಪಾಠಶಾಲೆಗಳ ಆಡಳಿತ ನಿರ್ವಹಣೆಯನ್ನು ವಿಶ್ವವಿದ್ಯಾಲಯದ ಅಧೀನದಲ್ಲಿರುವ ಸಂಸ್ಕೃತ ಶಿಕ್ಷಣ ನಿರ್ದೇಶನಾಲಯಕ್ಕೆ 01.04.2011ರಿಂದ ಜಾರಿಗೆ ಬರುವಂತೆ ವರ್ಗಾವಣೆ ಮಾಡಿದುದರಿಂದ ವಿಶ್ವವಿದ್ಯಾಲಯ ಹಂತದಲ್ಲಿಯೇ ಕ್ರಮ ತೆಗೆದುಕೊಳ್ಳುವಂತೆ ಉಪನಿರ್ದೇಶಕರು (ಸಂಸ್ಕೃತ), ಸಾರ್ವಜನಿಕ ಶಿಕ್ಷಣ ಇಲಾಖೆ, ಆಯುಕ್ತರ ಕಛೇರಿ, ಬೆಂಗಳೂರು ಇವರು ದಿನಾಂಕ: 16.06.2011ರ ಪತ್ರದಲ್ಲಿ ತಿಳಿಸಿರುವಂತೆ ಸಂಬಂಧಿಸಿದ ಆಡಳಿತ ಮಂಡಳಿಯವರಿಂದ ಖಾಲಿ ಹುದ್ದೆಗಳ ಮಾಹಿತಿಗಳನ್ನು ತರಿಸಿಕೊಂಡು ಚಾಲ್ತಿಯಲ್ಲಿರುವ ದಿನಾಂಕ: 20.06.1995ರ ಮೀಸಲಾತಿ ನಿಯಮ ಮತ್ತು ನೇಮಕಾತಿ ನಿಯಮಗಳಂತೆ ನೇಮಕಾತಿ ಮಾಡಿಕೊಳ್ಳಲು ಅನುಮತಿ ನೀಡಲಾಗಿದೆ. ಅನುಮತಿಯಂತೆ ಆಡಳಿತ ಮಂಡಳಿಯವರು ಪತ್ರಿಕಾ ಪ್ರಕಟಣೆ ನೀಡಿ, ನಿರ್ದೇಶನಾಲಯದ ಪ್ರತಿನಿಧಿಯನ್ನೊಳಗೊಂಡಂತೆ ಆಯ್ಕೆ ಸಮಿತಿಯನ್ನು ರಚಿಸಿಕೊಂಡು, ಅಭ್ಯರ್ಥಿಗಳನ್ನು ಸಂದರ್ಶಿಸಿ, ಆಯ್ಕೆ ಸಮಿತಿಯವರು ಆಯ್ಕೆ ಮಾಡಿದ ಅಭ್ಯರ್ಥಿಗಳ ವಿವರಣೆಗಳೊಂದಿಗೆ ಅನುಮೋದನೆಗಾಗಿ ಸಲ್ಲಿಸಿರುವ ಪ್ರಸ್ತಾವನೆಯನ್ನು ಪರಿಶೀಲಿಸಿ 10 ಹುದ್ದೆಗಳಿಗೆ ಈಗ ವೇತನಸಹಿತ ಅನುಮೋದನೆಯನ್ನು ನೀಡಲಾಗಿದೆ.

2. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಶಿಕ್ಷಣ ಇಲಾಖೆ, ಬೆಂಗಳೂರುರವರು ಪತ್ರಸಂಖ್ಯೆ ಇಡಿ 154 ಯುಪಿಸಿ 2009, ದಿನಾಂಕ: 25.01.2011ರಲ್ಲಿ ಶ್ರೀ ಸಿದ್ಧಲಿಂಗೇಶ್ವರ ವೇದ ಮತ್ತು ಸಂಸ್ಕೃತ ಮಹಾವಿದ್ಯಾಲಯ –ಇಲ್ಲಿ ವಿದ್ಯಾರ್ಥಿಗಳ ಹೆಚ್ಚುವರಿ ದಾಖಲಾತಿಯಾದ್ದರಿಂದ ಹೆಚ್ಚುವರಿ ವಿಭಾಗಗಳ ಮಂಜೂರಾತಿ ಹಾಗೂ ಹೆಚ್ಚುವರಿ 25 ಶಿಕ್ಷಕರ ಹುದ್ದೆಗಳನ್ನು ಹೊಸದಾಗಿ ಮಂಜೂರು ಮಾಡಿ ವೇತನಾನುದಾನಕ್ಕೆ ಒಳಪಡಿಸಿ ಅನುಮತಿ ನೀಡಿರುತ್ತಾರೆ. ಈ ಸಂಬಂಧ ಆಡಳಿತ ಮಂಡಳಿಯವರು ನೇಮಕಾತಿ ಹಾಗೂ ಮೀಸಲಾತಿ ನಿಯಮಗಳನ್ನು ಅನುಸರಿಸಿ ಶಿಕ್ಷಕರನ್ನು ನೇಮಕ ಮಾಡಿಕೊಂಡು ಅನುಮೋದನೆಗಾಗಿ ಸಲ್ಲಿಸಿರುವ ಪ್ರಸ್ತಾವನೆಯನ್ನು ಪರಿಶೀಲಿಸಿ, ನಿಯಮಾನುಸಾರ ಇರುವ ಬಗ್ಗೆ ದೃಢಪಡಿಸಿಕೊಂಡು ನೇಮಕಗೊಂಡ ಹುದ್ದೆಗಳನ್ನು ಅನುದಾನಸಹಿತ ಅನುಮೋದಿಸಲಾಗಿದೆ.

ನಿರ್ಣಯ: **ಮೇಲ್ಕಂಡ ಅಂಶಗಳನ್ನು ಸಭೆಯು ವಿವರವಾಗಿ ಪರಿಶೀಲಿಸಿ ಸರ್ಕಾರದಿಂದ ಮಂಜೂರಾಗಿರುವ ಒಟ್ಟು ಹುದ್ದೆಗಳ ನೇಮಕಾತಿಗೂ ಸರ್ಕಾರವು ಕಾಲಕಾಲಕ್ಕೆ ಹೊರಡಿಸುವ ನಿಯಮಗಳಿಗೆ ಅನುಗುಣವಾಗಿ ಆಯಾಯ ಆಡಳಿತ ಮಂಡಳಿ ಹಾಗೂ ನೇಮಕಾತಿ ಮಂಡಳಿಗಳು ಸಂಪೂರ್ಣವಾಗಿ ಅವಲೋಕಿಸಿ ಕ್ರಮಬದ್ಧವಾಗಿ ಭರ್ತಿ ಮಾಡಿಕೊಳ್ಳುವುದು ಅವಶ್ಯವೆಂದು ಸೂಚಿಸಿ ತನ್ನ ಅನುಮೋದನೆಯನ್ನು ನೀಡಿತು.**

**ವಿಷಯ 18: ಘಟಕ ಕಾಲೇಜುಗಳಾದ ಬೆಂಗಳೂರು ಮತ್ತು ಮೈಸೂರಿನ ಸಂಸ್ಕೃತ ಕಾಲೇಜುಗಳ ಚರ–ಸ್ಥಿರಾಸ್ತಿಗಳನ್ನು ವಿಶ್ವವಿದ್ಯಾಲಯಕ್ಕೆ ವರ್ಗಾಯಿಸುವುದರ ಬಗೆಗೆ.**

ಟಿಪ್ಪಣಿ: ಶ್ರೀ ಚಾಮರಾಜೇಂದ್ರ ಸಂಸ್ಕೃತ ಕಾಲೇಜು, ಚಾಮರಾಜಪೇಟೆ, ಬೆಂಗಳೂರು ಮತ್ತು ಶ್ರೀಮನ್ಮಹಾರಾಜ ಸರ್ಕಾರಿ ಸಂಸ್ಕೃತ ಕಾಲೇಜು, ನ್ಯೂ ಸಯ್ಯಾಜಿರಾವ್ ರಸ್ತೆ, ಮೈಸೂರು –ಈ ಎರಡೂ ಕಾಲೇಜುಗಳನ್ನು ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಘಟಕ ಕಾಲೇಜುಗಳಾಗಿ ವರ್ಗಾಯಿಸಿರುವ ಹಿನ್ನೆಲೆಯಲ್ಲಿ ಈ ಕಾಲೇಜುಗಳ ಚರ–ಸ್ಥಿರಾಸ್ತಿಗಳ ಬಗೆಗೆ ಕಾಲೇಜುಗಳಿಂದ ಮಾಹಿತಿ ಪಡೆದು, ವಿಶ್ವವಿದ್ಯಾಲಯಕ್ಕೆ ಈ ಎರಡೂ ಘಟಕ ಕಾಲೇಜುಗಳ ಚರ–ಸ್ಥಿರಾಸ್ತಿಗಳನ್ನು ವರ್ಗಾಯಿಸುವಂತೆ ಕೋರಿ ಸರ್ಕಾರಕ್ಕೆ ದಾಖಲೆಗಳನ್ನು ಸಲ್ಲಿಸಿ ಪತ್ರ (ಪತ್ರ ಸಂಖ್ಯೆ: ಕಸಂವಿ/56/ಘಕಾವಿ/2011–12, ದಿನಾಂಕ: 07.09.2011) ಬರೆಯಲಾಗಿದೆ.

ನಿರ್ಣಯ: **ಮೇಲ್ಕಂಡ ವಿಷಯಗಳನ್ನು ಸಭೆಯು ವಿಸ್ತಾರವಾಗಿ ಪರಿಶೀಲಿಸಿತು. ಆದಷ್ಟು ಬೇಗ ಚರ–ಸ್ಥಿರಾಸ್ತಿಗಳನ್ನು ವಿಶ್ವವಿದ್ಯಾಲಯಕ್ಕೆ ಸರ್ಕಾರವು ವರ್ಗಾಯಿಸುವುದು ಸೂಕ್ತವೆಂದು ನಿರ್ಣಯಿಸಿತು. ಈ ಸಂಬಂಧವಾಗಿ ಸರ್ಕಾರಕ್ಕೆ ನೆನಪಿನೋಲೆ ಬರೆಯಲು ಸಭೆ ಸೂಚಿಸಿತು.**

**ವಿಷಯ 19: ಸಂಸ್ಕೃತ ಶಿಕ್ಷಣ ನಿರ್ದೇಶನಾಲಯದ ಮೂಲಕ ಸಂಸ್ಕೃತ ಪೂರ್ವಪ್ರಾಥಮಿಕ ಶಿಕ್ಷಣ ಯೋಜನೆಯನ್ನು 2012–13ನೇ ಸಾಲಿನಿಂದ ಪ್ರಾರಂಭಿಸುವ ಬಗೆಗೆ.**

ಟಿಪ್ಪಣಿ: ಕರ್ನಾಟಕ ರಾಜ್ಯದಲ್ಲಿ ಪಾರಂಪರಿಕ ಸಂಸ್ಕೃತ ಹಾಗೂ ಶಾಸ್ತ್ರಾಧ್ಯಯನ ವ್ಯವಸ್ಥೆಯಲ್ಲಿ ಪ್ರಥಮಾ ತರಗತಿಯಿಂದ ಆರಂಭಿಸಿ ವಿದ್ವದುತ್ತಮಾ ತರಗತಿಗಳವರೆಗೆ 13 ವರ್ಷಗಳ ಅಧ್ಯಯನ ಅವಧಿ ನಿರ್ದಿಷ್ಟವಾಗಿದೆ. ಸಾಮಾನ್ಯ ಶಾಲೆಯ 4ನೇ ತರಗತಿ ಉತ್ತೀರ್ಣವಾದ ಅಥವಾ 9 ವರ್ಷ ಪೂರ್ಣಗೊಂಡ ವಿದ್ಯಾರ್ಥಿಗಳಿಗೆ ಪ್ರಥಮಾ ತರಗತಿಗಳಲ್ಲಿ ಪ್ರವೇಶ ನೀಡಲಾಗುತ್ತದೆ. ಆದರೆ, ಈ ಸಮಗ್ರ ವ್ಯವಸ್ಥೆಯನ್ನು 17 ವರ್ಷಗಳಿಗೆ ಸಮನಾಗುವಂತೆ ಪೂರ್ಣಗೊಳಿಸಲು ಮೊದಲ ನಾಲ್ಕು ವರ್ಷದ ಪೂರ್ವಪ್ರಾಥಮಿಕ ಸಂಸ್ಕೃತ ಪ್ರವೇಶಾಧ್ಯಯನವನ್ನು ಜೋಡಿಸಬೇಕಾಗಿದೆ. ಈ ವ್ಯವಸ್ಥೆಯನ್ನು ಆರಂಭ ಮಾಡಲು ಅಧ್ಯಾಪಕರ ನಿಯೋಜನೆ ಇತ್ಯಾದಿಗಳ ವಿಷಯದಲ್ಲಿ ಸರ್ಕಾರದ ಅನುದಾನ ಲಭ್ಯವಿಲ್ಲದ ಕಾರಣ 'ಪೂರ್ವಪ್ರಾಥಮಿಕ ಸಂಸ್ಕೃತ ಶಿಕ್ಷಣ' ಎಂಬ ಯೋಜನೆಯನ್ನು ಶಿಕ್ಷಣ ನಿರ್ದೇಶನಾಲಯದ ಅಡಿಯಲ್ಲಿ ಆರಂಭಿಸಬಹುದಾಗಿದೆ.

ಈ ಶಿಕ್ಷಣಕ್ಕಾಗಿ ಪ್ರತ್ಯೇಕವಾದ ಪಠ್ಯವನ್ನು ರಚಿಸಿ ಅನುದಾನಿತ ಹಾಗೂ ಅನುದಾನರಹಿತ ಪಾಠಶಾಲೆಗಳಲ್ಲಿ ಈ ವ್ಯವಸ್ಥೆಯ ಆರಂಭಕ್ಕಾಗಿ ಯಾವುದಾದರೊಂದು ಸಂಸ್ಥೆಯನ್ನು ನೋಡಲ್ ಏಜೆನ್ಸಿಯಂತೆ ಗುರುತಿಸಿ ಈ ಯೋಜನೆಯ ಜವಾಬ್ದಾರಿಯನ್ನು ವಹಿಸಿಕೊಡಬಹುದಾಗಿದೆ. ಈ ಸಂಬಂಧ ಪ್ರಶಿಕ್ಷಿತ ಅಧ್ಯಾಪಕರನ್ನು ನಿಯೋಜಿಸುವ ಮತ್ತು ಅದನ್ನು ನಿರ್ವಹಿಸುವ ಪೂರ್ಣ ಜವಾಬ್ದಾರಿ ಆ ಸಂಸ್ಥೆಗೆ ಇರುತ್ತದೆ. ವಿಶ್ವವಿದ್ಯಾಲಯವು ಪರಸ್ಪರ ತಿಳುವಳಿಕೆಯ ಒಪ್ಪಂದದನ್ವಯ ಆಧಾರದ ಮೇಲೆ ಈ ಯೋಜನಾ ವೆಚ್ಚವನ್ನು ಸಂಸ್ಥೆಗೆ ನೀಡಬೇಕಾಗುತ್ತದೆ. ಈ ವಿಷಯದ ಸಮಗ್ರ ಪ್ರಸ್ತಾವನೆಯನ್ನು ಸಿದ್ಧಪಡಿಸಲು ಉಪಸಮಿತಿಯೊಂದನ್ನು ರಚಿಸಬಹುದಾಗಿದೆ.

ನಿರ್ಣಯ: **ಮೇಲ್ಕಂಡ ಸಂಗತಿಗಳನ್ನು ಸಭೆಯು ಪರಿಶೀಲಿಸಿ ಈ ಸಂಬಂಧವಾಗಿ ಉಪಸಮಿತಿಯೊಂದನ್ನು ರಚಿಸಿ ವರದಿಯೊಂದನ್ನು ನೀಡಲು ಅನುಮೋದಿಸಿತು.**

| | |
|---|---|
| 1. ಪಂ. ಜಯತೀರ್ಥಾಚಾರ್ಯ ಮಳಗಿ, ಧಾರವಾಡ | ಅಧ್ಯಕ್ಷರು |
| 2. ಡಾ. ಎಚ್.ಆರ್. ವಿಶ್ವಾಸ್, ಮಂಗಳೂರು | ಸದಸ್ಯರು |
| 3. ಡಾ. ಎ. ಹರಿದಾಸ ಭಟ್ಟ, ಬೆಂಗಳೂರು | ಸದಸ್ಯರು |
| 4. ವಿದ್ವಾನ್ ಚಂದ್ರಶೇಖರಯ್ಯ, ರಾಮನಗರ | ಸದಸ್ಯರು |
| 5. ನಿರ್ದೇಶಕರು | ಸದಸ್ಯ ಕಾರ್ಯದರ್ಶಿ |

### ವಿಷಯ 20: ಪ್ರಥಮಾ, ಕಾವ್ಯ, ಸಾಹಿತ್ಯ –ಇವುಗಳ ಪುನಃಸಂಯೋಜನೆ ಮತ್ತು ಪಠ್ಯಪುಸ್ತಕ ನಿರ್ಮಾಣ ಮಾಡುವುದರ ಬಗೆಗೆ.

ಟಿಪ್ಪಣಿ: ಪ್ರಥಮಾ, ಕಾವ್ಯ ಮತ್ತು ಸಾಹಿತ್ಯ ತರಗತಿಗಳನ್ನು ಕ್ರಮವಾಗಿ 3, 2, 3 ವರ್ಷಗಳ ವ್ಯಾಸಂಗಾವಧಿಗೆ ನಿರ್ದಿಷ್ಟಗೊಳಿಸಿ, ಅಂತೆಯೇ 35 ವರ್ಷಗಳ ಹಿಂದೆ ಪಾಠ್ಯಕ್ರಮವನ್ನು ರೂಪಿಸಲಾಗಿತ್ತು. ಈ ವ್ಯಾಸಂಗ ವ್ಯವಸ್ಥೆಯಲ್ಲಿ ಸಮಾನತೆಯ ದೃಷ್ಟಿಯಿಂದ ಸಾಕಷ್ಟು ತಾಂತ್ರಿಕ ತೊಂದರೆಗಳಿರುವುದರಿಂದ ಈ ಕೆಳಗಿನ ಕ್ರಮದಲ್ಲಿ ಪುನಾರಚಿಸಬಹುದಾಗಿದೆ. ಈ ಸಂಬಂಧವಾಗಿ ಸಮಗ್ರ ಪಸ್ತಾವನೆಯನ್ನು ಪೂರ್ವಾಪರವಾಗಿ ಪರಿಶೀಲಿಸಲು ಉಪಸಮಿತಿಯೊಂದರ ಅಗತ್ಯವಿದೆ.

| | |
|---|---|
| ಸಂಸ್ಕೃತ ಪ್ರಥಮಾ: | 3 ವರ್ಷಗಳ ಅವಧಿ |
| ವೇದ ಪ್ರಥಮಾ | 5–6–7ನೇ ತರಗತಿಗಳಿಗೆ ಸಮಾನಾಂತರ ಶಿಕ್ಷಣ |
| ಸಂಸ್ಕೃತ ಕಾವ್ಯ: | 3 ವರ್ಷಗಳ ಅವಧಿ |
| ವೇದ ಪ್ರವೇಶ | 8–9–10ನೇ ತರಗತಿಗಳಿಗೆ ಸಮಾನಾಂತರ ಶಿಕ್ಷಣ |
| ಸಂಸ್ಕೃತ ಸಾಹಿತ್ಯ: | 2 ವರ್ಷಗಳ ಅವಧಿ |
| ವೇದ ಮೂಲ: | 11–12ನೇ ತರಗತಿ ಪದವಿಪೂರ್ವ ಶಿಕ್ಷಣಕ್ಕೆ ಸಮಾನಾಂತರ |

ನಿರ್ಣಯ: **ಮೇಲ್ಕಂಡ ಸಂಗತಿಗಳನ್ನು ಸಭೆಯು ಪರಿಶೀಲಿಸಿತು. ಈ ಸಂಬಂಧವಾಗಿ ಉಪಸಮಿತಿಯೊಂದನ್ನು ರಚಿಸಿ ವರದಿಯೊಂದನ್ನು ನೀಡಲು ಸಭೆಯು ಅನುಮೋದಿಸಿತು.**

| | |
|---|---|
| 1. ಶ್ರೀ ಪಿ. ಸುರೇಂದ್ರಕುಮಾರ್, ಬೆಂಗಳೂರು | ಅಧ್ಯಕ್ಷರು |
| 2. ಡಾ. ಟಿ.ಎಸ್. ಸತ್ಯವತಿ, ಬೆಂಗಳೂರು | ಸದಸ್ಯರು |
| 3. ಶ್ರೀ ಜಿ. ಹನುಮಂತರಾಯಪ್ಪ, ತುಮಕೂರು | ಸದಸ್ಯರು |
| 4. ವಿದ್ವಾನ್ ಡಿ.ಎಸ್. ಚಂದ್ರಶೇಖರಯ್ಯ, ಸಿದ್ಧಗಂಗಾಮಠ, ತುಮಕೂರು | ಸದಸ್ಯರು |
| 5. ನಿರ್ದೇಶಕರು | ಸದಸ್ಯ ಕಾರ್ಯದರ್ಶಿ |

### ವಿಷಯ 21: ಘಟಕ ಕಾಲೇಜುಗಳ ಅಧ್ಯಾಪಕರ ಜ್ಯೇಷ್ಠತಾಪಟ್ಟಿ ಪ್ರಸ್ತಾವದ ಬಗೆಗೆ.

**ಟಿಪ್ಪಣಿ:** ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಘಟಕ ಕಾಲೇಜುಗಳಾದ ಶ್ರೀ ಚಾಮರಾಜೇಂದ್ರ ಸಂಸ್ಕೃತ ಕಾಲೇಜು, ಚಾಮರಾಜಪೇಟೆ, ಬೆಂಗಳೂರು ಮತ್ತು ಶ್ರೀಮನ್ಮಹಾರಾಜ ಸರ್ಕಾರಿ ಸಂಸ್ಕೃತ ಕಾಲೇಜು, ನ್ಯೂ ಸಯ್ಯಾಜಿರಾವ್ ರಸ್ತೆ, ಮೈಸೂರು –ಈ ಎರಡೂ ಕಾಲೇಜುಗಳಲ್ಲಿ ಸುಮಾರು ಎರಡು ದಶಕಗಳಿಂದ ಪ್ರಾಚಾರ್ಯರ ಹುದ್ದೆಯು ಖಾಲಿಯಿದ್ದು, ಪ್ರಸ್ತುತ ಪ್ರಭಾರಿ ಪ್ರಾಚಾರ್ಯರು ಕಾಲೇಜಿನ ಆಡಳಿತವನ್ನು ನಿರ್ವಹಿಸುತ್ತಿದ್ದಾರೆ. ಈ ಕಾಲೇಜುಗಳಿಗೆ ಖಾಯಂ ಪ್ರಾಚಾರ್ಯರನ್ನು ನೇಮಿಸುವ ಅಗತ್ಯವಿದ್ದು, ಈ ಕಾಲೇಜುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧ್ಯಾಪಕರ ಜ್ಯೇಷ್ಠತಾಪಟ್ಟಿಯನ್ನು ಸಿದ್ಧಪಡಿಸಿ ಅನುಮೋದನೆಗಾಗಿ ಸರ್ಕಾರಕ್ಕೆ ಸಲ್ಲಿಸಿದೆ. (ಪತ್ರ ಸಂಖ್ಯೆ: ಕಸಂವಿ/56/ಘಕಾವಿ/2011–12/417, ದಿನಾಂಕ: 06.07.2011)

ನಿರ್ಣಯ: **ಮೈಸೂರು ಹಾಗೂ ಬೆಂಗಳೂರಿನ ಸಂಸ್ಕೃತ ಕಾಲೇಜುಗಳ ಅಧ್ಯಾಪಕರ ಜ್ಯೇಷ್ಠತಾಪಟ್ಟಿ ವಿವರಗಳನ್ನು ಸಭೆಯು ಪರಿಶೀಲಿಸಿ ಸರ್ಕಾರಕ್ಕೆ ಸಲ್ಲಿಸಿರುವ ಪ್ರಸ್ತಾವನೆಯನ್ನು ಆದಷ್ಟೂ ಬೇಗ ಪಡೆಯಬೇಕು. ಈ ಬಗೆಗೆ ಸರ್ಕಾರಕ್ಕೆ ನೆನಪಿನೋಲೆ ಬರೆಯುವುದು. ಅನಂತರ ಪ್ರಶಿಕ್ಷಣ ಪರಿಷತ್ತು ಹಾಗೂ ಪ್ರಶಾಸನ ಸಭೆಯಲ್ಲಿ ಮಂಡಿಸಿ ಯುಕ್ತರೀತಿಯಲ್ಲಿ ಕ್ರಮಕೈಗೊಳ್ಳಲು ನಿರ್ಣಯಿಸಿತು.**

### ವಿಷಯ 22: 1985ರಿಂದ 2000ರ ವರೆಗಿನ ಅನುದಾನರಹಿತ ಶಾಲೆಗಳನ್ನು ವೇತನಾನುದಾನಕ್ಕೆ ಒಳಪಡಿಸಲು ಸರ್ಕಾರಕ್ಕೆ ಸಲ್ಲಿಸಿರುವ ಪ್ರಸ್ತಾವನೆ ಬಗೆಗೆ.

ಟಿಪ್ಪಣಿ: ಕರ್ನಾಟಕದಲ್ಲಿ ಸಂಸ್ಕೃತ ಭಾಷೆ ಮತ್ತು ಸಾಹಿತ್ಯವನ್ನು ಪೋಷಿಸಿ ಬೆಳೆಸುವ ಸದುದ್ದೇಶದಿಂದ ಸರ್ಕಾರವು ಸಂಸ್ಕೃತ ವಿಶ್ವವಿದ್ಯಾಲಯವನ್ನು ಸ್ಥಾಪಿಸಿದೆ. ಪ್ರಸ್ತುತ 65 ಅನುದಾನರಹಿತ ಸಂಸ್ಕೃತ ಪಾಠಶಾಲೆಗಳು ಕಾರ್ಯನಿರ್ವಹಿಸುತ್ತಿವೆ. 1985ರಿಂದ ಆರಂಭಿಸಿ ನಡೆಸಿಕೊಂಡು ಬರುತ್ತಿರುವ ಸಂಸ್ಕೃತ ಪಾಠಶಾಲೆಗಳನ್ನು ವೇತನಾನುದಾನಕ್ಕೆ ಈವರೆಗೂ ಒಳಪಡಿಸಿರುವುದಿಲ್ಲ. ಆದುದರಿಂದ, 1985ರ ನಂತರದಲ್ಲಿ ಪ್ರಾರಂಭಿಸಲಾದ ಸಾಮಾನ್ಯ ಶಾಲೆಗಳನ್ನು ವೇತನಾನುದಾನಕ್ಕೆ ಈಗಾಗಲೇ ಒಳಪಡಿಸುವುದು ಅಗತ್ಯವಾಗಿದೆ. ರಾಜ್ಯದಲ್ಲಿ ಕೇವಲ 45 ಶಾಲೆಗಳು 1985ರಿಂದ 2000ನೇ ಸಾಲಿನವರೆಗೆ ಅನುದಾನರಹಿತವಾಗಿ ಕಾರ್ಯನಿರ್ವಹಿಸುತ್ತಿವೆ. ಈ 45 ಸಂಸ್ಕೃತ ಪಾಠಶಾಲೆಗಳಲ್ಲಿ ಬಹುತೇಕ ಶಾಲೆಗಳು ಗ್ರಾಮೀಣ ಪರಿಸರದಲ್ಲಿವೆ. ಸಂಸ್ಕೃತ ಶಿಕ್ಷಣದಿಂದಾಗಿ ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳಿಗೆ ಉತ್ತಮ ಸಂಸ್ಕಾರ ದೊರೆಯುವಂತಾಗಿದೆ. ಈ ಸಂಸ್ಕೃತ ಶಾಲೆಗಳನ್ನು ವೇತನಾನುದಾನಕ್ಕೆ ಒಳಪಡಿಸಿದರೆ ಸರ್ಕಾರಕ್ಕೆ ವಾರ್ಷಿಕ ಒಂದು ಕೋಟಿ ರೂ.ಗಳು ಮಾತ್ರ

ಆರ್ಥಿಕ ಹೊರೆಯಾಗುತ್ತದೆ. ಆದ್ದರಿಂದ ಸಂಸ್ಕೃತ ಭಾಷೆಯ ಪ್ರಸಾರ ಹಾಗೂ ಪ್ರೋತ್ಸಾಹದ ಉದ್ದೇಶದಿಂದ ಅನುದಾನರಹಿತ ಶಾಲೆಗಳಿಗೆ 2012–13ನೇ ಸಾಲಿನ ಆಯವ್ಯಯದಲ್ಲಿ ಒಂದು ಕೋಟಿ ರೂಪಾಯಿಗಳನ್ನು ಕಾಯ್ದಿರಿಸಿಕೊಂಡು ಮೊದಲ ಹಂತದಲ್ಲಿ ಅನುದಾನರಹಿತ 45 ಶಾಲೆಗಳನ್ನು ವೇತನಾನುದಾನಕ್ಕೆ ಒಳಪಡಿಸುವ ಪ್ರಸ್ತಾವವನ್ನು ಸಂಬಂಧಪಟ್ಟ ಅಂಕಿಅಂಶಗಳ ಕ್ರೋಢೀಕೃತ ವಿವರಗಳೊಂದಿಗೆ ಮಾನ್ಯ ಕುಲಪತಿಗಳು ಸರ್ಕಾರಕ್ಕೆ ಪತ್ರ ಬರೆದಿದ್ದಾರೆ. (ದಿನಾಂಕ: ಕಸಂವಿ/ಸಂ.ಶಿ.ನಿ./39/ ಅ.ರ.ಶಾ.ಅನುದಾನ/2011–12, ದಿನಾಂಕ: 07.09.2011)

ನಿರ್ಣಯ: **1985ರಿಂದ 2000 ವರೆಗೆ 45 ಪಾಠಶಾಲೆಗಳನ್ನು ಅನುದಾನಕ್ಕೆ ಒಳಪಡಿಸಲು ಸೂಕ್ತ ಪ್ರಸ್ತಾವವನ್ನು ಮಾನ್ಯ ಕುಲಪತಿಗಳು ಸರ್ಕಾರಕ್ಕೆ ಸಲ್ಲಿಸಿರುವುದರ ಬಗೆಗೆ ಸಭೆಯು ಸಂತೋಷವನ್ನು ವ್ಯಕ್ತಪಡಿಸಿ 1985–2000 ನಡುವೆ ಸಕ್ರಮವಾಗಿ ನಡೆಯುತ್ತಿರುವ ಪಾಠಶಾಲೆಗಳನ್ನು ವೇತನಾನುದಾನಕ್ಕೆ ಒಳಪಡಿಸಲು ತನ್ನ ಅನುಮೋದನೆಯನ್ನು ನೀಡಿತು.**

### ವಿಷಯ 23: ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ ಪರಿನಿಯಮ 2011ರ ಪರಿಶೀಲನೆಗೆ ಉಪಸಮಿತಿ ರಚಿಸುವುದರ ಬಗೆಗೆ.

ಟಿಪ್ಪಣಿ: ಕರ್ನಾಟಕದಲ್ಲಿ ಸಂಸ್ಕೃತ ಭಾಷೆಯನ್ನು ಪೋಷಿಸಿ ಬೆಳೆಸುವ ಸದುದ್ದೇಶದಿಂದ ಸರ್ಕಾರವು ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವನ್ನು ಸ್ಥಾಪಿಸಿ ಮೇ 9, 2010ರಂದು ಅಧಿಸೂಚನೆಯನ್ನು ಪ್ರಕಟಿಸಿದೆ. ಶೈಕ್ಷಣಿಕ ಹಾಗೂ ಆಡಳಿತಾತ್ಮಕ ಕಾರ್ಯನಿರ್ವಹಣೆಗಾಗಿ ವಿಶ್ವವಿದ್ಯಾಲಯಕ್ಕೆ ಪರಿನಿಯಮವನ್ನು ರಚಿಸಲು ಪ್ರೊ. ಕೃ. ನರಹರಿ, ಪ್ರೊ. ಡಿ. ಪ್ರಹ್ಲಾದಾಚಾರ್ಯ ಮತ್ತು ಡಾ. ಆರ್.ಆರ್. ಕುಲಕರ್ಣಿ ಅವರನ್ನೊಳಗೊಂಡ **'ಪರಿನಿಯಮ ರಚನಾ ಸಮಿತಿ'**ಯನ್ನು ಕುಲಪತಿಗಳು ನೇಮಿಸಿದ್ದರು. ಈ ಸಮಿತಿಯು ಪರಿನಿಯಮದ ಕರಡು ಪ್ರತಿಯನ್ನು ಸಿದ್ಧಪಡಿಸಿದ್ದು, ಈ ಪರಿನಿಯಮದ ಪರಿಶೀಲನೆಗಾಗಿ ಒಂದು ಉಪಸಮಿತಿಯನ್ನು ರಚಿಸಬೇಕಾಗಿದೆ. ಈ ಬಗ್ಗೆ ಈ ಸಭೆಯಲ್ಲಿ ನಿರ್ಣಯಕ್ಕಾಗಿ ಕೋರಿದೆ.

ನಿರ್ಣಯ: **ಮಾನ್ಯ ಕುಲಪತಿಗಳು ಮೇಲ್ಕಂಡ ಸಂಗತಿಯನ್ನು ಸಭೆಯ ಮುಂದೆ ವಿವರವಾಗಿ ತಿಳಿಸಿದರು. ಈಗಾಗಲೇ ಕುಲಪತಿಗಳ ಅಧ್ಯಕ್ಷತೆಯಲ್ಲಿ ರಚನೆಗೊಂಡಿರುವ ಸಮಿತಿಯು ಸಿದ್ಧಪಡಿಸಿರುವ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ ಪರಿನಿಯಮ 2011 ಅನ್ನು ತಾತ್ವಿಕವಾಗಿ ಪರಿಶೀಲಿಸಲು ಹಾಗೂ ಈ ಕೆಳಕಂಡ ಉಪಸಮಿತಿಯೊಂದನ್ನು ರಚಿಸಿ ಆದಷ್ಟೂ ಬೇಗ ವರದಿಯೊಂದನ್ನು ನೀಡಲು ಸಭೆಯು ಅನುಮೋದಿಸಿತು.**

| | |
|---|---|
| 1. ಡಾ. ಪಿ.ಬಿ. ಸಂತಪ್ಪನವರ, ಗುಲಬರ್ಗಾ | ಅಧ್ಯಕ್ಷರು |
| 2. ಪಂ. ಜಯತೀರ್ಥಾಚಾರ್ಯ ಮಳಗಿ, ಧಾರವಾಡ | ಸದಸ್ಯರು |
| 3. ಪ್ರೊ. ಎನ್. ಅಶ್ವತ್ಥಮ್ಮ, ಮೈಸೂರು | ಸದಸ್ಯರು |
| 4. ಡಾ. ವ್ಹಿ.ಜಿ. ಹೆಗಡೆ, ಕಾರವಾರ | ಸದಸ್ಯರು |
| 5. ಡಾ. ಆರ್.ಆರ್. ಕುಲಕರ್ಣಿ, ಬೆಂಗಳೂರು | ಸದಸ್ಯರು |
| 6. ಕುಲಸಚಿವರು | ಸದಸ್ಯ ಕಾರ್ಯದರ್ಶಿ |

### ವಿಷಯ 24: ಸಂಸ್ಕೃತ ಶಿಕ್ಷಣ ನಿರ್ದೇಶನಾಲಯದ ಪರಿನಿಯಮ 2011ರ ಪರಿಶೀಲನೆಗೆ ಉಪಸಮಿತಿ ರಚಿಸುವುದರ ಬಗೆಗೆ.

ಟಿಪ್ಪಣಿ: ಸಾರ್ವಜನಿಕ ಶಿಕ್ಷಣ ಇಲಾಖೆಯ ಅಡಿಯಲ್ಲಿ ಜಾರಿಯಲ್ಲಿದ್ದ ಸಂಸ್ಕೃತ ಪಾಠಶಾಲೆಗಳ ಅನುದಾನಸಂಹಿತೆಯು 1979ರಲ್ಲಿ ರಚನೆಯಾಗಿತ್ತು. ಆ ಸಂಹಿತೆಯ ನಿಯಮಗಳು ಅನೇಕ ವಿಷಯಗಳಲ್ಲಿ ಸರ್ಕಾರದ ನೀತಿ–ನಿಯಮಗಳು ಹಾಗೂ ಬದಲಾದ ವ್ಯವಸ್ಥೆಗೆ ಹೊಂದುತ್ತಿರುವುದಿಲ್ಲ. ಈ ಹಿನ್ನೆಲೆಯಲ್ಲಿ ಮತ್ತು ಸರ್ಕಾರವು ಸಂಸ್ಕೃತ ಶಿಕ್ಷಣ ನಿರ್ದೇಶನಾಲಯವನ್ನು ಆರಂಭಿಸಿ, ಅದರ ಅಡಿಯಲ್ಲಿ ಪಾಠಶಾಲೆಗಳನ್ನು ತಂದಿರುವ ಹಿನ್ನೆಲೆಯಲ್ಲಿ ಸಂಸ್ಕೃತ ಶಿಕ್ಷಣ ನಿರ್ದೇಶನಾಲಯದ ಪರಿನಿಯಮ–2011ರ ಕರಡು ಪ್ರತಿಯನ್ನು ರಚಿಸಲು ಒಂದು ಸಮಿತಿಯನ್ನು ರಚಿಸಲಾಗಿತ್ತು. ಡಾ. ಶ್ರೀನಿವಾಸ ವರಖೇಡಿ, ನಿರ್ದೇಶಕರು, ಸಂಸ್ಕೃತ ಶಿಕ್ಷಣ ನಿರ್ದೇಶನಾಲಯ –ಇವರ ಅಧ್ಯಕ್ಷತೆಯಲ್ಲಿ ಡಾ. ಆರ್.ಆರ್. ಕುಲಕರ್ಣಿ, ವಿಶ್ರಾಂತ ಪ್ರಾಚಾರ್ಯರು, ವಿದ್ವಾನ್ ಕೆ. ಗಂಗಣ್ಣ, ಸಹಾಯಕ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ–ಸಂಸ್ಕೃತ ವಿಭಾಗ, ವಿದ್ವಾನ್ ಜಿ.ಎಲ್. ಭಟ್, ನಿವೃತ್ತ ಪ್ರಾಚಾರ್ಯರು –ಇವರನ್ನು ಒಳಗೊಂಡ ಸಮಿತಿಯು ಈ ಪರಿನಿಯಮಗಳ ಕರಡುಪ್ರತಿಯನ್ನು ರಚಿಸಿದೆ. ಪರಿನಿಯಮದ ಪರಿಶೀಲನೆಗಾಗಿ ಒಂದು ಉಪಸಮಿತಿಯನ್ನು ರಚಿಸಬೇಕಾಗಿದೆ.

ನಿರ್ಣಯ: **ಮೇಲ್ಕಂಡ ಸಂಗತಿಯನ್ನು ಮಾನ್ಯ ಕುಲಪತಿಗಳು ಸಭೆಯ ಮುಂದೆ ವಿವರವಾಗಿ ತಿಳಿಸಿದರು. ಈಗಾಗಲೇ ನಿರ್ದೇಶಕರ ಅಧ್ಯಕ್ಷತೆಯಲ್ಲಿ ರಚನೆಗೊಂಡಿರುವ ಸಮಿತಿಯು ಸಿದ್ಧಪಡಿಸಿರುವ ಸಂಸ್ಕೃತ ಶಿಕ್ಷಣ ನಿರ್ದೇಶನಾಲಯ ಪರಿನಿಯಮ 2011 ಅನ್ನು ತಾತ್ವಿಕವಾಗಿ ಪರಿಶೀಲಿಸಲು ಈ ಕೆಳಕಂಡ ಉಪಸಮಿತಿಯೊಂದನ್ನು ರಚಿಸಿ ಆದಷ್ಟೂ ಬೇಗ ವರದಿಯೊಂದನ್ನು ನೀಡಲು ಸಭೆಯು ತನ್ನ ಅನುಮೋದನೆಯನ್ನು ನೀಡಿತು.**

| | |
|---|---|
| 1. ಡಾ. ಟಿ.ಎಸ್. ಸತ್ಯವತಿ, ಬೆಂಗಳೂರು | ಅಧ್ಯಕ್ಷರು |
| 2. ಶ್ರೀ ಜಿ. ಹನುಮಂತರಾಯಪ್ಪ, ತುಮಕೂರು | ಸದಸ್ಯರು |
| 3. ವಿದ್ವಾನ್ ಸಿ. ನಂಜುಂಡಯ್ಯ, ಆದಿಚುಂಚನಗಿರಿ | ಸದಸ್ಯರು |
| 4. ವಿದ್ವಾನ್ ಕೆ. ಗಂಗಣ್ಣ (ತಜ್ಞರು), ಬೆಂಗಳೂರು | ಸದಸ್ಯರು |
| 5. ನಿರ್ದೇಶಕರು | ಸದಸ್ಯ ಕಾರ್ಯದರ್ಶಿ |

### ವಿಷಯ 25: ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಪ್ರಸಾರಾಂಗ ಪ್ರಾರಂಭಿಸುವುದು ಹಾಗೂ ಮುದ್ರಣ ದರಪಟ್ಟಿಗಳ ಪರಿಶೀಲನೆ ಮತ್ತು ಸ್ಥಿರೀಕರಣದ ಬಗೆಗೆ.

ಟಿಪ್ಪಣಿ: ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು ಪ್ರಸಾರಾಂಗ ಪ್ರಾರಂಭಿಸಿದೆ. ನಿಯತವಾಗಿ ಪ್ರಕಟಣೆಗಳನ್ನು ಹೊರತರಬೇಕಾಗಿದೆ. ಈಗಾಗಲೇ ಅನೇಕ ವಿಶ್ವವಿದ್ಯಾಲಯಗಳಲ್ಲಿ ಮುದ್ರಣಕ್ಕೆ ಸಂಬಂಧಿಸಿದ ದರಗಳನ್ನು ನಿಗದಿಗೊಳಿಸಿಕೊಂಡಿವೆ. ಕನ್ನಡ

ವಿಶ್ವವಿದ್ಯಾಲಯದ ದರಪಟ್ಟಿಯು ಸೂಕ್ತವಾಗಿದ್ದು, ಕೆಲವು ತಿದ್ದುಪಾಡು ಹಾಗೂ ಸೇರ್ಪಡೆಗಳೊಂದಿಗೆ ಅನುಮೋದಿಸಲು ಇರಿಸಲಾಗಿದೆ.

| ಸಂ. | ವಿವರ | ಕ್ರೌನ್ 1/8 ಮತ್ತು ಡೆಮಿ 1/12 | ಡೆಮಿ 1/8 | ಕ್ರೌನ್ 1/4 | ಡೆಮಿ 1/4 |
|---|---|---|---|---|---|
| 1) | ಡಿ.ಟಿ.ಪಿ (ಪುಟ ಒಂದಕ್ಕೆ) | ರೂ. 20/–(ಕ) | ರೂ. 25/–(ಕ) | ರೂ. 35/–(ಕ) | ರೂ. 50/–(ಕ) |
| | | ರೂ. 25/–(ಇ) | ರೂ. 30/–(ಇ) | ರೂ. 40/–(ಇ) | ರೂ. 60/–(ಇ) |
| | | ರೂ. 30/–(ಸಂ) | ರೂ. 35/–(ಸಂ) | ರೂ. 45/– (ಸಂ) | ರೂ. 70/–(ಸಂ) |
| 2) | ಮುದ್ರಣ ಮತ್ತು ಪ್ಲೇಟ್ ತಯಾರಿಕೆ | | | | |
| | (ಪುಟ ಒಂದಕ್ಕೆ ಒಂದು ಸಾವಿರಕ್ಕೆ) | ರೂ. 40/– | ರೂ. 40/– | ರೂ. 80/– | ರೂ. 80/– |
| | (ಹೆಚ್ಚುವರಿ ಒಂದು ಪುಟಕ್ಕೆ ಒಂದು ಸಾವಿರಕ್ಕೆ) | ರೂ. 20/– | ರೂ. 20/– | ರೂ. 40/– | ರೂ. 40/– |
| 3) | ರಕ್ಷಾಪುಟ ವಿನ್ಯಾಸ (ಹೊರಗಿನವರಿಗೆ) | ರೂ. 1000/– | ರೂ. 1000/– | ರೂ. 1500/– | ರೂ. 2000/– |
| 4) | ಲ್ಯಾಮಿನೇಷನ್ (ಪ್ರತಿ ಒಂದಕ್ಕೆ–ಗ್ಲೇಸ್ಡ್) | ಪೈಸೆ 0.80/– | ರೂ. 1.00/– | ರೂ. 1.50/– | ರೂ. 1.50/– |
| | (ಮ್ಯಾಟ್) | ರೂ. 1.00/– | ರೂ. 1.50/– | ರೂ. 2.00/– | ರೂ. 2.00/– |
| 5) | ಬೈಂಡಿಂಗ್ (ಹೊಲಿಗೆ ಸಹಿತ ಪರ್‌ಫೆಕ್ಟ್ ಬೈಂಡಿಂಗ್ ಒಂದು ಪುಸ್ತಕಕ್ಕೆ) | | | | |
| | ಅ. 1 ರಿಂದ 160 ಪುಟದವರೆಗೆ | ರೂ. 3/– | ರೂ. 4/– | ರೂ. 6/– | ರೂ. 6/– |
| | ಆ. 161 ರಿಂದ 300 ಪುಟದವರೆಗೆ | ರೂ. 4/– | ರೂ. 4.50/– | ರೂ. 6.50/– | ರೂ. 6.50/– |
| | ಇ. 301 ರಿಂದ 400 ಪುಟದವರೆಗೆ | ರೂ. 5/– | ರೂ. 5/– | ರೂ. 7/– | ರೂ. 7/– |
| | ಈ. 401 ರಿಂದ 500 ಪುಟದವರೆಗೆ | ರೂ. 6/– | ರೂ. 6/– | ರೂ. 8/– | ರೂ. 8/– |
| | ಉ. 501 ರಿಂದ 800 ಪುಟದವರೆಗೆ | ರೂ. 8/– | ರೂ. 8/– | ರೂ. 10/– | ರೂ. 10/– |
| | ಊ. 801 ರಿಂದ 1000 ಪುಟದವರೆಗೆ | ರೂ. 10/– | ರೂ. 10/– | ರೂ. 12/– | ರೂ. 12/– |
| 6) | ಕೇಸ್ (ಬಾಕ್ಸ್) ಬೈಂಡಿಂಗ್ (ಹೊಲಿಗೆ ಸಹಿತ) | | | | |
| | 1 ರಿಂದ 500 ಪುಟದವರೆಗೆ ಒಂದು ಪುಸ್ತಕಕ್ಕೆ | ರೂ. 20/– | ರೂ. 25/– | ರೂ. 35/– | ರೂ. 40/– |
| | 500 ರಿಂದ ಮೇಲ್ಪಟ್ಟು | ರೂ. 25/– | ರೂ. 30/– | ರೂ. 40/– | ರೂ. 45/– |
| 7) | ಕ್ಲಾತ್ ಬೈಂಡಿಂಗ್ | | | | ರೂ. 70/– |
| | ಗೋಲ್ಡ್ ಫಾಯಿಲ್ ಪ್ರಿಂಟ್ | | | | ರೂ. 20/– |

8) ರಕ್ಷಾಪುಟ ಮುದ್ರಣ ಮತ್ತು ಪ್ಲೇಟ್ ತಯಾರಿಕೆ

1. ನಾಲ್ಕು ಪುಟಗಳ ಪ್ಲೇಟ್ ತಯಾರಿಕೆ ಪ್ರತಿ ಬಣ್ಣಕ್ಕೆ ರೂ. 200/–
2. ನಾಲ್ಕು ಪುಟಗಳ ಮುದ್ರಣ ಒಂದು ಬಣ್ಣದಲ್ಲಿ 1000 ಪ್ರತಿಗಳವರೆಗೆ ರೂ. 200/–
3. ನಾಲ್ಕು ಪುಟಗಳ ಪ್ಲೇಟ್ ಹಾಗೂ ಮುದ್ರಣ 1000 ಪ್ರತಿಗಳವರೆಗೆ ತಯಾರಿಕೆ ಪ್ರತಿ ಬಣ್ಣಕ್ಕೆ ರೂ. 1750/–
4. ನಾಲ್ಕು ಪುಟಗಳ ಮುಖಪುಟ ಮುದ್ರಣದ 1000 ಪ್ರತಿಗಳ ನಂತರದ ಪ್ರತಿ ಬಣ್ಣಕ್ಕೆ ರೂ. 200/–

9) ಸೆಂಟರ್ ಪಿನ್ ಬೈಂಡಿಂಗ್ (ಒಂದು ಪುಸ್ತಕಕ್ಕೆ)

32 ಪುಟಗಳವೆರೆಗೆ 1ರೂ., 64 ಪುಟಗಳವರೆಗೆ 2 ರೂ.

10) ವರ್ಣ ವಿಭಜನೆ

1. ಒಂದು ಬಣ್ಣ ಕಪ್ಪು / ಬಿಳಿ ಪಾಸಿಟಿವ್ ತಯಾರಿಕೆ ಚದರ ಇಂಚು ರೂ. 5/–
2. ರಕ್ಷಾಪುಟದ ವರ್ಣವಿಭಜನೆ ಸೂಪರ್ ಇಂಪೋಸ್ ಪ್ರತಿ ಚದರ ಇಂಚು ರೂ. 14/–
3. ಒಂದು ಬಣ್ಣದ ಸಿಸ್ಟಮ್ ಸ್ಕ್ಯಾನಿಂಗ್ ಪ್ರತಿ ಚಿತ್ರಕ್ಕೆ ರೂ. 5/–

11) ಕಾಗದ ದೃಢೀಕರಣ

ರಕ್ಷಾಪುಟ ಮತ್ತು ಒಳಪುಟಗಳಲ್ಲಿ ಬಳಸಿದ ಕಾರ್ಡ್ ಹಾಗೂ ಕಾಗದಕ್ಕೆ ಆಯಾಯ ಕಾಲಸಂದರ್ಭಗಳಿಗೆ ಅನ್ವಯವಾಗುವಂತೆ ದರಪಟ್ಟಿ ಸಮೇತ ದೃಢೀಕರಣ ಪತ್ರವನ್ನು ನೀಡಬೇಕು.

12) ಕರಡು ತಿದ್ದುವುದು

| | | | |
|---|---|---|---|
| **ಕ್ರೌನ್ 1/8 ಪುಟಕ್ಕೆ** | ರೂ. 4/–(ಕ); | ರೂ. 6/–(ಇ); | ರೂ. 8/–(ಸಂ) |
| **ಡೆಮ್ಮಿ 1/8 ಪುಟಕ್ಕೆ** | ರೂ. 5/–(ಕ); | ರೂ. 8/–(ಇ); | ರೂ. 10/–(ಸಂ) |
| **ಕ್ರೌನ್ 1/4 ಪುಟಕ್ಕೆ** | ರೂ. 6/–(ಕ); | ರೂ. 8/–(ಇ); | ರೂ. 12/–(ಸಂ) |
| **ಡೆಮ್ಮಿ 1/4 ಪುಟಕ್ಕೆ** | ರೂ. 8/–(ಕ); | ರೂ. 10/–(ಇ); | ರೂ. 15/–(ಸಂ) |

13) ರೇಖಾಚಿತ್ರ, ಛಾಯಾಚಿತ್ರ, ಸ್ಲೈಡ್, ನಕ್ಷೆ, ಕಲಾಕೃತಿಗಳಿಗೆ

1. ಒಂದು ರೇಖಾಚಿತ್ರಕ್ಕೆ ಕನಿಷ್ಠ ರೂ. 40/– ಗರಿಷ್ಠ ರೂ. 100/–
2. ಒಂದು ಕಪ್ಪು ಬಿಳಿಪು ಛಾಯಾಚಿತ್ರಕ್ಕೆ ರೂ. 50/–
3. ಒಂದು ಬಣ್ಣದ ಛಾಯಾಚಿತ್ರಕ್ಕೆ ರೂ. 100/–
4. ಒಂದು ಸ್ಲೈಡ್‌ಗೆ ರೂ. 200/–
5. ಒಂದು ಬಣ್ಣದ ಕಲಾಕೃತಿಗೆ ರೂ. 300/–
6. ಒಂದು ಬಣ್ಣದ ನಕ್ಷೆಗೆ ಅರ್ಧ ಪುಟಕ್ಕೆ ಕನಿಷ್ಠ ರೂ. 100/– ಗರಿಷ್ಠ ರೂ. 300/–

14) ಗೌರವ ಸಂಭಾವನೆ

1. ಸ್ವತಂತ್ರ ಗ್ರಂಥಕ್ಕೆ (ತಾಂತ್ರಿಕ ಪುಟಗಳನ್ನು ಹೊರತುಪಡಿಸಿ)
   ಕ್ರೌನ್ 1/8 ಪುಟಕ್ಕೆ ರೂ. 50/– ಡೆಮ್ಮಿ 1/8 ಪುಟಕ್ಕೆ ರೂ. 60/–
   ಕ್ರೌನ್ 1/4 ಪುಟಕ್ಕೆ ರೂ. 80/– ಡೆಮ್ಮಿ 1/4 ಪುಟಕ್ಕೆ ರೂ. 100/–
2. ಸಂಪಾದಿತ ಕೃತಿಗೆ (ತಾಂತ್ರಿಕ ಪುಟಗಳನ್ನು ಹೊರತುಪಡಿಸಿ)
   ಕ್ರೌನ್ 1/8 ಪುಟಕ್ಕೆ ರೂ. 25/– ಡೆಮ್ಮಿ 1/8 ಪುಟಕ್ಕೆ ರೂ. 35/–
   ಕ್ರೌನ್ 1/4 ಪುಟಕ್ಕೆ ರೂ. 40/– ಡೆಮ್ಮಿ 1/4 ಪುಟಕ್ಕೆ ರೂ. 50/–
3. ಲೇಖನಗಳಿಗೂ ಇದೇ ದರ ಅನ್ವಯವಾಗುವುದು.
4. ಅನುವಾದ ಗ್ರಂಥದ ಅನುವಾದಕರಿಗೆ ಅರ್ಧ ಹಾಗೂ ಮೂಲ ಲೇಖಕರಿಗೆ ಅರ್ಧ ಗೌರವ ಸಂಭಾವನೆ ನೀಡುವುದು.
5. ಹಸ್ತಪ್ರತಿ ಪರಿಶೀಲನೆಗೆ ಕೆಳಗೆ ಸೂಚಿಸಿದಂತೆ ಸಂಭಾವನೆ ನೀಡುವುದು.

| | | | | | |
|---|---|---|---|---|---|
| 1 | – | 100 | = | 500/– | |
| 101 | – | 200 | = | 1000/– | |
| 201 | – | 300 | = | 3000/– | |
| 301 | – | 400 | = | 4000/– | |
| 401 | – | 500 | = | 5000/– | |
| 501 | – | 600 | = | 6000/– | ಇದರಂತೆ ಮುಂದುವರಿಯುವುದು. |

15) ಗೌರವ ಪ್ರತಿಗಳು

1. ಸ್ವತಂತ್ರ ಕೃತಿಗಳಿಗೆ ಗೌರವ ಪ್ರತಿಗಳು 30.
2. ಸಂಪಾದಿತ ಕೃತಿಗಳಿಗೆ ಗೌರವ ಪ್ರತಿಗಳು 30. (ಸಂಪಾದಕರು ಎಷ್ಟೇ ಜನರಿದ್ದರೂ).
3. ವಿಶೇಷೋಪನ್ಯಾಸ ಕೃತಿಗಳಿಗೆ ಒಂದು ಉಪನ್ಯಾಸಕ್ಕೆ ರೂ. 500/– ಹಾಗೂ ಪ್ರವಾಸ ಭತ್ಯೆ, ದಿನಭತ್ಯೆ ನೀಡುವುದು. ಪುಸ್ತಕ ಪ್ರಕಟವಾದಾಗ ಮತ್ತೆ ರೂ. 1000/– ಗೌರವ ಧನ ಹಾಗೂ 30 ಗೌರವ ಪ್ರತಿಗಳು ನೀಡುವುದು. ವಿಶ್ವವಿದ್ಯಾಲಯದ ಸದಸ್ಯರಿಗೆ ಪ್ರವಾಸ ಭತ್ಯೆ, ದಿನಭತ್ಯೆ ಮಾತ್ರ ನೀಡಲಾಗುವುದು. ಗೌರವ ಪ್ರತಿಗಳು 30 ನೀಡುವುದು. (ವಿಶೇಷ ಸಂದರ್ಭದಲ್ಲಿ ಇದಕ್ಕೆ ಮಾನ್ಯ ಕುಲಪತಿಗಳ ಅನುಮೋದನೆ ಪಡೆಯುವುದು ಅಗತ್ಯ.)

16) ಪುನರ್ ಮುದ್ರಣ

1. ಲೇಖಕರಿಗೆ, ಸಂಪಾದಕರಿಗೆ, ಅನುವಾದಕರಿಗೆ ಪ್ರಥಮ ಮುದ್ರಣದ ಅರ್ಧದಷ್ಟು ಗೌರವಧನ ನೀಡುವುದು. (ವಿಶೇಷ ಸಂದರ್ಭದಲ್ಲಿ ಇದಕ್ಕೆ ಮಾನ್ಯ ಕುಲಪತಿಗಳ ಅನುಮೋದನೆ ಪಡೆಯುವುದು ಅಗತ್ಯ.)

17) ಅಕ್ಷರ ಸಂಯೋಜನೆ

1. ಡೆಮ್ಮಿ 1/8 ಒಂದು ಪುಟಕ್ಕೆ ರೂ. 8/–, ಡೆಮ್ಮಿ 1/4 ಒಂದು ಪುಟಕ್ಕೆ ರೂ. 16/–, ಕ್ರೌನ್ 1/4 ಒಂದು ಪುಟಕ್ಕೆ ರೂ. 12/– (ಕೇವಲ ಅಕ್ಷರ ಸಂಯೋಜನೆಗೆ ಮಾತ್ರ).
2. ಡೆಮ್ಮಿ 1/8 ಒಂದು ಪುಟಕ್ಕೆ ರೂ. 20/–, ಡೆಮ್ಮಿ 1/4 ಒಂದು ಪುಟಕ್ಕೆ ರೂ. 30/–, ಕ್ರೌನ್ 1/4 ಒಂದು ಪುಟಕ್ಕೆ ರೂ. 25/– (ಅಕ್ಷರ ಸಂಯೋಜಿಸಿ ಎರಡು ಕರಡು ನೀಡುವುದು).
3. ಪುಟವಿನ್ಯಾಸಕ್ಕೆ ಒಂದು ಪುಟಕ್ಕೆ ರೂ. 8/–, ಡೆಮ್ಮಿ 1/4 ಒಂದು ಪುಟಕ್ಕೆ ರೂ. 12/–, ಕ್ರೌನ್ 1/4 ಒಂದು ಪುಟಕ್ಕೆ ರೂ. 10/–
4. ಹೆಚ್ಚುವರಿ ಕರಡು ಹಾಳೆಗೆ ಡೆಮ್ಮಿ 1/4 ಒಂದು ಪುಟಕ್ಕೆ ರೂ. 5/– (ವಿಶೇಷ ಸಂದರ್ಭದಲ್ಲಿ ಇದಕ್ಕೆ ಮಾನ್ಯ ಕುಲಪತಿಗಳ ಅನುಮೋದನೆ ಪಡೆಯುವುದು.)

ನಿರ್ಣಯ: **ಮೇಲಿನ ದರಪಟ್ಟಿಯು ಕನ್ನಡ ವಿಶ್ವವಿದ್ಯಾಲಯ–ಹಂಪಿ, ಕೇಂದ್ರ ಸಾಹಿತ್ಯ ಅಕಾಡೆಮಿ, ರಾಜ್ಯ ಸಾಹಿತ್ಯ ಅಕಾಡೆಮಿ ಹಾಗೂ ಇತರ ಅನುದಾನಿತ ಸಂಸ್ಥೆಗಳು ಪ್ರಕಟಿಸುವ ದರಪಟ್ಟಿಗೆ ಅನುಗುಣವಾಗಿದ್ದು ಮುಂದಿನ ಆದೇಶದವರೆಗೂ ಈ ಮುದ್ರಣ ದರಗಳನ್ನು ಒಪ್ಪಬಹುದೆಂದು ಕುಲಪತಿಗಳು ಸೂಚಿಸಿದರು. ಈ ಅಂಶಗಳನ್ನು ಪರಿಶೀಲಿಸಿದ ಸಭೆಯು ತನ್ನ ಅನುಮೋದನೆಯನ್ನು ನೀಡಿತು.**

### ವಿಷಯ 26: ಪ್ರಸಾರಾಂಗ ಸಲಹಾ ಸಮಿತಿ ರಚನೆಯ ಬಗೆಗೆ.

ಟಿಪ್ಪಣಿ: ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ವತಿಯಿಂದ ಪ್ರಾಚ್ಯ ಹಾಗೂ ಅರ್ವಾಚೀನ ಗ್ರಂಥಗಳ ಹಾಗೂ ಅಪರೂಪದ ವಿಶಿಷ್ಟ ಗ್ರಂಥಗಳ ಲಭ್ಯತೆ ಹಾಗೂ ಪ್ರಸಾರಕ್ಕಾಗಿ ಪ್ರಸಾರಾಂಗವನ್ನು ಆರಂಭಿಸಲಾಗಿದ್ದು, ಈ ಕುರಿತು ಸಲಹಾ ಸಮಿತಿಯನ್ನು ರಚಿಸಬೇಕಾಗಿದೆ.

ನಿರ್ಣಯ: **ಮೇಲ್ಕಂಡ ವಿಷಯವನ್ನು ಪರಿಶೀಲಿಸಿದ ಸಭೆಯು ಈ ಕೆಳಕಂಡ ವಿದ್ವಾಂಸರನ್ನು ಒಳಗೊಂಡ ಸಮಿತಿಯೊಂದನ್ನು ಎರಡು ವರ್ಷಗಳ ಅವಧಿಗೆ ನೇಮಿಸಿ ಅನುಮೋದಿಸಿತು.**

| | |
|---|---|
| 1. ಕುಲಪತಿಗಳು | ಅಧ್ಯಕ್ಷರು |
| 2. ಡಾ. ಎಚ್.ಆರ್. ವಿಶ್ವಾಸ್, ಮಂಗಳೂರು | ಸದಸ್ಯರು |
| 3. ಡಾ. ಜನಾರ್ದನ ಹೆಗಡೆ, ಬೆಂಗಳೂರು | ಸದಸ್ಯರು |
| 4. ಡಾ. ಎ. ಹರಿದಾಸ ಭಟ್ಟ, ಬೆಂಗಳೂರು | ಸದಸ್ಯರು |
| 5. ಡಾ. ಇ. ಮಹಾಬಲ ಭಟ್ಟ, ಉಜಿರೆ | ಸದಸ್ಯರು |
| 6. ಡಾ. ಎಸ್. ಶಿವರಾಜಪ್ಪ, ಮೈಸೂರು | ಸದಸ್ಯರು |
| 7. ಕುಲಸಚಿವರು | ಸದಸ್ಯ ಕಾರ್ಯದರ್ಶಿ |

**ವಿಷಯ 27: ಅನುದಾನಿತ–ಅನುದಾನರಹಿತ ಪಾಠಶಾಲೆಗಳ ಶೈಕ್ಷಣಿಕ ಸಲಹಾ ಸಮಿತಿ ರಚನೆಯ ಬಗೆಗೆ.**

ಟಿಪ್ಪಣಿ: ಸಂಸ್ಕೃತ ಶಿಕ್ಷಣ ನಿರ್ದೇಶನಾಲಯದ ಅಧೀನದಲ್ಲಿರುವ ಅನುದಾನಸಹಿತ ಮತ್ತು ಅನುದಾನರಹಿತ ಪಾಠಶಾಲೆಗಳ ಆಡಳಿತ ಹಾಗೂ ಶೈಕ್ಷಣಿಕ ಚಟುವಟಿಕೆಗಳನ್ನು ನಿರ್ವಹಿಸಲು ಸಲಹಾ ಸಮಿತಿಯೊಂದನ್ನು ರಚಿಸಬೇಕಾಗಿರುತ್ತದೆ.

ನಿರ್ಣಯ: **ಮೇಲ್ಕಂಡ ವಿಷಯವನ್ನು ಪರಿಶೀಲಿಸಿದ ಸಭೆಯು ಈ ಕೆಳಕಂಡ ತಜ್ಞರನ್ನು ಒಳಗೊಂಡ ಸಮಿತಿಯೊಂದನ್ನು ಎರಡು ವರ್ಷಗಳ ಅವಧಿಗೆ ನೇಮಿಸಿ ಅನುಮೋದಿಸಿತು.**

| | |
|---|---|
| 1. ಕುಲಪತಿಗಳು | ಅಧ್ಯಕ್ಷರು |
| 2. ಡಾ. ಸಿದ್ಧಲಿಂಗ ಶಿವಾಚಾರ್ಯ ಮಹಾಸ್ವಾಮಿಗಳು | ಸದಸ್ಯರು |
| 3. ಡಾ. ಸುರೇಶ್ ಆಚಾರ್ಯ, ಉಡುಪಿ | ಸದಸ್ಯರು |
| 4. ವಿದ್ವಾನ್ ಜಿ.ಎಲ್. ಭಟ್ಟ | ಸದಸ್ಯರು |
| 5. ವಿದ್ವಾನ್ ಚಂದ್ರಶೇಖರಯ್ಯ, ರಾಮನಗರ | ಸದಸ್ಯರು |
| 6. ನಿರ್ದೇಶಕರು | ಸದಸ್ಯ ಕಾರ್ಯದರ್ಶಿ |

**ವಿಷಯ 28: ಅನುದಾನಿತ ಸಂಸ್ಕೃತ ಕಾಲೇಜುಗಳ ಶೈಕ್ಷಣಿಕ ಸಲಹಾ ಸಮಿತಿ ರಚನೆಯ ಬಗೆಗೆ.**

ಟಿಪ್ಪಣಿ: ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಅಧೀನದಲ್ಲಿರುವ ಸರ್ಕಾರಿ, ಅನುದಾನಸಹಿತ ಮತ್ತು ರಹಿತ ಕಾಲೇಜುಗಳ ಆಡಳಿತ ಹಾಗೂ ಶೈಕ್ಷಣಿಕ ಚಟುವಟಿಕೆಗಳನ್ನು ನಿರ್ವಹಿಸಲು ಸಲಹಾ ಸಮಿತಿಯನ್ನು ರಚಿಸಬೇಕಾಗಿರುತ್ತದೆ.

ನಿರ್ಣಯ: **ಮೇಲ್ಕಂಡ ವಿಷಯವನ್ನು ಪರಿಶೀಲಿಸಿದ ಸಭೆಯು ಈ ಕೆಳಕಂಡ ತಜ್ಞರನ್ನು ಒಳಗೊಂಡ ಸಮಿತಿಯೊಂದನ್ನು ಎರಡು ವರ್ಷಗಳ ಅವಧಿಗೆ ನೇಮಿಸಿ ಅನುಮೋದಿಸಿತು.**

| | |
|---|---|
| 1. ಕುಲಪತಿಗಳು | ಅಧ್ಯಕ್ಷರು |
| 2. ಡಾ. ಪಿ.ಬಿ. ಸಂತಪ್ಪನವರ, ಗುಲಬರ್ಗಾ | ಸದಸ್ಯರು |
| 3. ಡಾ. ಎ. ಹರಿದಾಸ ಭಟ್ಟ, ಬೆಂಗಳೂರು | ಸದಸ್ಯರು |
| 4. ಡಾ. ರಾಮಚಂದ್ರ ಭಟ್ಟ ಕೋಟೆಮನೆ, ಬೆಂಗಳೂರು | ಸದಸ್ಯರು |
| 5. ಡಾ. ಮಹೇಶ್ವರ ಶಿವಾಚಾರ್ಯ ಸ್ವಾಮಿಗಳು, ಕೆಳದಿ | ಸದಸ್ಯರು |
| 6. ಕುಲಸಚಿವರು | ಸದಸ್ಯ ಕಾರ್ಯದರ್ಶಿ |

**ವಿಷಯ 29: ಸಂಸ್ಕೃತ ವಿಶ್ವವಿದ್ಯಾಲಯದಲ್ಲಿ 'ಇ–ಗ್ರಂಥಾಲಯ' ಪ್ರಾರಂಭಿಸುವ ಬಗೆಗೆ.**

ಟಿಪ್ಪಣಿ: ಸಂಸ್ಕೃತದಲ್ಲಿನ ಶಾಸ್ತ್ರ–ಸಾಹಿತ್ಯ ಪರಂಪರೆಯ ಪ್ರಾಚೀನ ಹಾಗೂ ನೂತನ ಗ್ರಂಥಗಳು ಜನಸಾಮಾನ್ಯರಿಗೆ ಲಭ್ಯವಾಗುವ ದೃಷ್ಟಿಯಿಂದ ಹಾಗೂ ಇವುಗಳು ವಿದ್ಯುನ್ಮಾನ ಮಾಧ್ಯಮದಲ್ಲಿಯೂ ಪ್ರಪಂಚದೆಲ್ಲೆಡೆ ಜ್ಞಾನಶಾಖೆಯು ಪಸರಿಸಬೇಕಾದ ಕಾರಣ ವಿಶ್ವವಿದ್ಯಾಲಯದಲ್ಲಿ ಇ–ಗ್ರಂಥಾಲಯವನ್ನು ಪ್ರಾರಂಭಿಸಬೇಕಾಗಿರುತ್ತದೆ. ಇದನ್ನು ವಿಶ್ವವಿದ್ಯಾಲಯದ ವೆಬ್‌ಸೈಟ್‌ನೊಂದಿಗೆ ಸಂಯೋಜಿಸಿ ಪ್ರಪಂಚದೆಲ್ಲೆಡೆ ಜ್ಞಾನಪಿಪಾಸುಗಳಿಗೆ ಬಳಕೆಗೆ ಲಭ್ಯವಾಗುವಂತೆ ಮಾಡಬೇಕಾಗಿರುತ್ತದೆ.

ನಿರ್ಣಯ: **ಮೇಲ್ಕಂಡ ಅಂಶಕ್ಕೆ ಸಭೆಯು ತನ್ನ ಮೆಚ್ಚುಗೆಯನ್ನು ವ್ಯಕ್ತಪಡಿಸಿ ವ್ಯವಸ್ಥಿತವಾಗಿ ನಡೆಸಲು ಹಾಗೂ ಇದಕ್ಕೆ ತಗುಲುವ ವಾರ್ಷಿಕ ವೆಚ್ಚವನ್ನು 2012–13ನೇ ಸಾಲಿನಲ್ಲಿ ನಿಗದಿಗೊಳಿಸಿಕೊಂಡು ಪ್ರಾರಂಭಿಸಲು ಸಭೆಯು ತನ್ನ ಅನುಮೋದನೆಯನ್ನು ನೀಡಿತು.**

**ವಿಷಯ 30: ವಿಶ್ವವಿದ್ಯಾಲಯದ ವಿವಿಧ ಸಮಿತಿಗಳ ರಚನೆಯ ಬಗೆಗೆ.**

ಟಿಪ್ಪಣಿ: ವಿಶ್ವವಿದ್ಯಾಲಯದ ಆಡಳಿತಾತ್ಮಕ ಹಾಗೂ ಶೈಕ್ಷಣಿಕ ಕಾರ್ಯಗಳು ವ್ಯವಸ್ಥಿತವಾಗಿ ನಡೆಯುವ ಉದ್ದೇಶದಿಂದ ಈ ಕೆಳಕಂಡ ವಿವಿಧ ಸಮಿತಿಗಳನ್ನು ರಚಿಸಲು ಸಭೆಯ ಅನುಮೋದನೆಗಾಗಿ ಮಂಡಿಸಲಾಗಿದೆ. ಅ) ಶಿಸ್ತುಪಾಲನಾ ಸಮಿತಿ/ ವಿಚಾರಣಾ ಸಮಿತಿ; ಆ) ಖರೀದಿ ಸಮಿತಿ; ಇ) ಪದೋನ್ನತಿ ಪರಿಶೀಲನಾ ಸಮಿತಿ; ಈ) ಛಾತ್ರದೌರ್ಜನ್ಯ ಪ್ರತಿರೋಧ ಸಮಿತಿ

ನಿರ್ಣಯ: **ಮೇಲ್ಕಂಡ ಎಲ್ಲ ವಿಷಯವನ್ನು ಪರಿಶೀಲಿಸಿದ ಸಭೆಯು ಈ ಕೆಳಕಂಡ ತಜ್ಞರನ್ನು ಒಳಗೊಂಡ ಸಮಿತಿಗಳನ್ನು ಎರಡು ವರ್ಷಗಳ ಅವಧಿಗೆ ನೇಮಿಸಿ ಅನುಮೋದಿಸಿತು.**

**ಅ) ಶಿಸ್ತುಪಾಲನ/ವಿಚಾರಣಾ ಸಮಿತಿ**

| | |
|---|---|
| 1. ಕುಲಪತಿಗಳು | ಅಧ್ಯಕ್ಷರು |
| 2. ಡಾ. ಸಿದ್ಧಲಿಂಗ ಶಿವಾಚಾರ್ಯ ಮಹಾಸ್ವಾಮಿಗಳು | ಸದಸ್ಯರು |
| 3. ಪಂ. ಜಯತೀರ್ಥಾಚಾರ್ಯ ಮಳಗಿ | ಸದಸ್ಯರು |
| 4. ಪ್ರೊ. ಎನ್. ಅಶ್ವತ್ಥಮ್ಮ | ಸದಸ್ಯರು |
| 5. ಶ್ರೀ ಸಿ. ವೆಂಕಟೇಶ್ (ಕಾನೂನು ಸಲಹೆಗಾರರು) | ಸದಸ್ಯರು |
| 6. ಕುಲಸಚಿವರು | ಸದಸ್ಯ ಕಾರ್ಯದರ್ಶಿ |

**ಆ) ಖರೀದಿ ಸಮಿತಿ**

| | |
|---|---|
| 1. ಕುಲಪತಿಗಳು | ಅಧ್ಯಕ್ಷರು |
| 2. ಡಾ. ಷಿ. ಸುರೇಂದ್ರಕುಮಾರ್ | ಸದಸ್ಯರು |
| 3. ಪ್ರೊ. ಎನ್. ಅಶ್ವತ್ಥಮ್ಮ | ಸದಸ್ಯರು |
| 4. ವಿದ್ವಾನ್ ಸಿ. ನಂಜುಂಡಯ್ಯ | ಸದಸ್ಯರು |
| 5. ಹಣಕಾಸು ಅಧಿಕಾರಿಗಳು | ಸದಸ್ಯ ಕಾರ್ಯದರ್ಶಿ |

**ಇ) ಪದೋನ್ನತಿ ಪರಿಶೀಲನಾ ಸಮಿತಿ**

| | |
|---|---|
| 1. ಕುಲಪತಿಗಳು | ಅಧ್ಯಕ್ಷರು |
| 2. ಡಾ. ಸಿದ್ಧಲಿಂಗ ಶಿವಾಚಾರ್ಯ ಮಹಾಸ್ವಾಮಿಗಳು | ಸದಸ್ಯರು |
| 3. ಪ್ರೊ. ಎನ್. ಅಶ್ವತ್ಥಮ್ಮ | ಸದಸ್ಯರು |
| 4. ವಿದ್ವಾನ್ ಸಿ. ನಂಜುಂಡಯ್ಯ | ಸದಸ್ಯರು |
| 5. ಶ್ರೀ ಸಿ. ವೆಂಕಟೇಶ್ (ಕಾನೂನು ಸಲಹೆಗಾರರು) | ಸದಸ್ಯರು |
| 6. ನಿರ್ದೇಶಕರು (ಸಂಸ್ಕೃತ ಶಿಕ್ಷಣ ನಿರ್ದೇಶನಾಲಯ) | ಸದಸ್ಯರು |
| 7. ಕುಲಸಚಿವರು | ಸದಸ್ಯ ಕಾರ್ಯದರ್ಶಿ |

**ಈ) ಛಾತ್ರದೌರ್ಜನ್ಯ ಪ್ರತಿವಿರೋಧ ಸಮಿತಿ**

| | |
|---|---|
| 1. ಕುಲಪತಿಗಳು | ಅಧ್ಯಕ್ಷರು |
| 2. ಡಾ. ಟಿ.ಎಸ್. ಸತ್ಯವತಿ | ಸದಸ್ಯರು |
| 3. ಶ್ರೀ ಜಿ. ಹನುಮಂತರಾಯಪ್ಪ | ಸದಸ್ಯರು |
| 4. ಶ್ರೀ ಸಿ. ವೆಂಕಟೇಶ್ (ಕಾನೂನು ಸಲಹೆಗಾರರು) | ಸದಸ್ಯರು |
| 5. ನಿರ್ದೇಶಕರು (ಸಂಸ್ಕೃತ ಶಿಕ್ಷಣ ನಿರ್ದೇಶನಾಲಯ) | ಸದಸ್ಯರು |
| 6. ಕುಲಸಚಿವರು | ಸದಸ್ಯ ಕಾರ್ಯದರ್ಶಿ |

## ಅಧ್ಯಕ್ಷರ ಅಪ್ಪಣೆ ಮೇರೆಗೆ ಇತರ ವಿಷಯಗಳು:

**ವಿಷಯ 1: 30.12.2011ರ ಹಣಕಾಸು ಸಮಿತಿ ಸಭೆಯ ನಡಾವಳಿ ಅನುಮೋದನೆ ಬಗೆಗೆ.**

ನಿರ್ಣಯ: **ಹಣಕಾಸು ಸಮಿತಿ ಸಭೆಯ ನಡಾವಳಿಯನ್ನು ಸಭೆಯು ಪರಿಶೀಲಿಸಿ ತನ್ನ ಅನುಮೋದನೆಯನ್ನು ನೀಡಿತು. 2012–13ನೇ ಆಯವ್ಯಯಕ್ಕೆ ತನ್ನ ಒಪ್ಪಿಗೆಯನ್ನು ನೀಡಿತು.**

**ವಿಷಯ 2: ಹೊರಗುತ್ತಿಗೆ ಸಿಬ್ಬಂದಿಗಳಿಗೆ ವೇತನ ಹೆಚ್ಚಿಸುವ ಬಗೆಗೆ.**

ಟಿಪ್ಪಣಿ: ಮಾನಸ ಎಂಟರ್‌ಪ್ರೈಸಸ್ –ಇವರು ಕಳೆದ 2009ರ ಸಾಲಿನಿಂದಲೂ ವಿಶ್ವವಿದ್ಯಾಲಯ ಹಾಗೂ ಸಂಸ್ಕೃತ ಶಿಕ್ಷಣ ನಿರ್ದೇಶನಾಲಯಕ್ಕೆ ಹೊರಗುತ್ತಿಗೆ ಸಿಬ್ಬಂದಿಗಳಿಗೆ ನಿರ್ದಿಷ್ಟ ದರದ ವೇತನವನ್ನು ನಿಗದಿಗೊಳಿಸಿ ಪಾವತಿಸುತ್ತಿದ್ದಾರೆ. ಈ ವೇತನವನ್ನು ಹೆಚ್ಚಿಸುವ ಬಗೆಗೆ ಮಾನಸ ಎಂಟರ್‌ಪ್ರೈಸಸ್‌ನವರು 31.10.2011ರಂದು ಪತ್ರ ನೀಡಿದ್ದಾರೆ. ಈಗಾಗಲೇ ಜಾನಪದ ವಿಶ್ವವಿದ್ಯಾಲಯದವರು ಹೊರಗುತ್ತಿಗೆ ಸಿಬ್ಬಂದಿಗಳನ್ನು ಕಿಯೋನಿಕ್ಸ್ ಸಂಸ್ಥೆಯಿಂದ ನೇಮಿಸಿಕೊಂಡು ಕಂಪ್ಯೂಟರ್ ಆಪರೇಟರ್, ದ್ವಿತೀಯ ದರ್ಜೆ ಸಹಾಯಕರು ಹಾಗೂ ಡಿ ಗ್ರೂಪ್ ನೌಕರರಿಗೆ ನೀಡುತ್ತಿರುವ ವೇತನಗಳನ್ನು ತಮ್ಮ ಸಿಬ್ಬಂದಿಗಳಿಗೂ ನೀಡಬೇಕೆಂದು ಬಯಸಿದ್ದಾರೆ. ಈ ಅಂಶವನ್ನು ಸಭೆಗೆ ಇರಿಸಲಾಗಿದೆ.

ನಿರ್ಣಯ: **ಸಭೆಯು ಕರ್ನಾಟಕ ಸರ್ಕಾರದ ಅಂಗಸಂಸ್ಥೆಯಾದ ಕಿಯೋನಿಕ್ಸ್ ಅವರು ನೀಡಿರುವ ವೇತನವನ್ನು ಪರಿಶೀಲಿಸಿ, ಈ ಕೆಳಕಂಡಂತೆ ವೇತನವನ್ನು ನೀಡಲು ಸಭೆಯು ಒಪ್ಪಿಗೆ ನೀಡಿತು.**

| **ಹುದ್ದೆಯ ಪದನಾಮ** | **ಒಟ್ಟು ವೇತನ** |
|---|---|
| ಪ್ರಥಮ ದರ್ಜೆ ಸಹಾಯಕರು | ರೂ. 10,000/– |
| ಕಂಪ್ಯೂಟರ್ ಆಪರೇಟರ್ | ರೂ. 9,000/– |
| ದ್ವಿತೀಯ ದರ್ಜೆ ಸಹಾಯಕರು | ರೂ. 8,500/– |
| ವಾಹನ ಚಾಲಕರು | ರೂ. 8,500/– |
| ಡಾಟಾ ಎಂಟ್ರಿ ಆಪರೇಟರ್ | ರೂ. 6,500/– |
| ಡಿ ಗ್ರೂಪ್ ನೌಕರರು | ರೂ. 6,000/– |

**ವಿಷಯ 3: ಪ್ರಶಾಸನ ಸಮಿತಿ ಸಭೆಯ ಸದಸ್ಯರಿಗೆ ಪ್ರಯಾಣಭತ್ಯೆ (ಕಾರಿನ ಪ್ರಯಾಣಭತ್ಯೆ) ನಿಗದಿಗೊಳಿಸುವ ಬಗೆಗೆ.**

ಟಿಪ್ಪಣಿ: ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ತನ್ನ ವ್ಯವಸ್ಥಾಪನ ಮಂಡಳಿ ಸಭೆ ಹಾಗೂ ವಿ.ವಿ.ಯ ವಿವಿಧ ಉಪಸಮಿತಿ ಸಭೆಗಳಿಗೆ ಭಾಗವಹಿಸುವ ಸಂದರ್ಭಗಳಲ್ಲಿ ಕಾರಿನ ಪ್ರಯಾಣಭತ್ಯೆಯನ್ನು ಕಿ.ಮೀ. ಒಂದಕ್ಕೆ 8 ರೂ.ಗಳಂತೆ ಪರಿಷ್ಕರಿಸಿ ಆದೇಶ ಸಂಖ್ಯೆ: ಕರಾಮುವಿ/ಯುಎ–1/09/2002–03, ದಿನಾಂಕ: 30.04.2010ರಂದು ಹೊರಡಿಸಿರುವ ಆದೇಶವನ್ನು ಸಭೆಯ ಮುಂದೆ ಮಂಡಿಸಲಾಗಿದೆ.

ನಿರ್ಣಯ: **ಪ್ರಶಾಸನ ಸಮಿತಿ ಹಾಗೂ ಪ್ರಶಿಕ್ಷಣ ಪರಿಷತ್ತಿನ ಹೊರಗಿನಿಂದ ಬರುವ ಗೌರವಾನ್ವಿತ ಸದಸ್ಯರಿಗೆ ಕಾರಿನ ಪ್ರಯಾಣಭತ್ಯೆಯನ್ನು ಕಿ.ಮೀ. ಒಂದಕ್ಕೆ 8 ರೂ.ಗಳಂತೆ ನೀಡುವ ಅಂಶಕ್ಕೆ ಸಭೆಯು ತನ್ನ ಒಪ್ಪಿಗೆಯನ್ನು ನೀಡಿತು.**

**ವಿಷಯ 4: ಪ್ರಶಾಸನ ಸಮಿತಿ ಮತ್ತು ಪ್ರಶಿಕ್ಷಣ ಪರಿಷತ್ತಿನ ಸದಸ್ಯರಿಗೆ ಸಭಾಭತ್ಯೆ ನಿಗದಿಗೊಳಿಸುವ ಬಗೆಗೆ.**

ಟಿಪ್ಪಣಿ: ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಪ್ರಶಾಸನ ಸಮಿತಿ ಮತ್ತು ಪ್ರಶಿಕ್ಷಣ ಪರಿಷತ್ತಿನ ಸದಸ್ಯರಿಗೆ ಈಗ ನೀಡುತ್ತಿರುವ ರೂ. 500/–ಗಳ ಸಭಾಭತ್ಯೆಯನ್ನು ಉಳಿದ ವಿಶ್ವವಿದ್ಯಾಲಯಗಳಲ್ಲಿರುವ ಸಿಂಡಿಕೇಟ್ ಹಾಗೂ ಅಕಾಡೆಮಿಕ್ ಕೌನ್ಸಿಲ್ ಸದಸ್ಯರಿಗೆ ನೀಡುತ್ತಿರುವ ಸಭಾಭತ್ಯೆಗೆ ಸಮಾನವಾಗಿ ನೀಡುವುದರ ಬಗೆಗೆ ಬಂದಿರುವ ಅಂಶಗಳನ್ನು ಪರಿಗಣಿಸಲು ಕೋರಿದೆ.

ನಿರ್ಣಯ: **ಪ್ರಶಾಸನ ಸಮಿತಿ ಮತ್ತು ಪ್ರಶಿಕ್ಷಣ ಪರಿಷತ್ತಿನ ಸದಸ್ಯರಿಗೆ ರೂ. 1000/–ಗಳ ಸಭಾಭತ್ಯೆಯನ್ನು ನೀಡಲು ಸಭೆಯು ಅನುಮೋದಿಸಿತು.**

**ವಿಷಯ 5: ಘಟಕ ಕಾಲೇಜುಗಳ ಸಾದಿಲ್ವಾರು ವೆಚ್ಚ ಪಾವತಿಸುವ ಬಗೆಗೆ.**

ಟಿಪ್ಪಣಿ: ವಿಶ್ವವಿದ್ಯಾಲಯದ ಘಟಕ ಕಾಲೇಜುಗಳಾದ ಶ್ರೀಮನ್ಮಹಾರಾಜ ಸರ್ಕಾರಿ ಸಂಸ್ಕೃತ ಕಾಲೇಜು ಮತ್ತು ಶ್ರೀ ಚಾಮರಾಜೇಂದ್ರ ಸಂಸ್ಕೃತ ಕಾಲೇಜು –ಈ ಎರಡೂ ಕಾಲೇಜುಗಳಿಗೆ 2011–12ನೇ ಸಾಲಿನಲ್ಲಿ ನೀಡಲಾಗುತ್ತಿರುವ ಸಾದಿಲ್ವಾರು ವೆಚ್ಚವನ್ನು ವಿಶ್ವವಿದ್ಯಾಲಯದಿಂದ ಪಾವತಿಸುತ್ತಿದೆ.

ನಿರ್ಣಯ: **ಮೇಲ್ಕಂಡ ವಾರ್ಷಿಕ ವೆಚ್ಚಕ್ಕೆ ಸಭೆಯು ತನ್ನ ಅನುಮೋದನೆಯನ್ನು ನೀಡಿತು.**

**ವಿಷಯ 6: ವಿಶ್ವವಿದ್ಯಾಲಯದ ಆಂತರಿಕ ಲೆಕ್ಕ ತಪಾಸಣೆ ಮಾಡಿಸಿದ ವೆಚ್ಚ ಪಾವತಿಸುವ ಬಗೆಗೆ.**

ಟಿಪ್ಪಣಿ: ವಿಶ್ವವಿದ್ಯಾಲಯಕ್ಕೆ ಸಂಬಂಧಪಟ್ಟ 2009–10, 2010–11 ಮತ್ತು 2011–12ನೇ ಸಾಲಿನ ಸಂಪೂರ್ಣ ಆರ್ಥಿಕ ವ್ಯವಹಾರಗಳನ್ನು ಆಂತರಿಕ ಲೆಕ್ಕ ತಪಾಸಣೆಯ ಮೂಲಕ ಮಾಡಿಸಲಾಗಿದೆ. ಈ ತಪಾಸಣಾ ಕಾರ್ಯಕ್ಕೆ ತಗುಲಿದ ಒಟ್ಟು ಮೂರು ವರ್ಷಗಳ ವೆಚ್ಚಕ್ಕೆ ಸಭೆಯ ಅನುಮೋದನೆಗಾಗಿ ಮಂಡಿಸಲಾಗಿದೆ.

ನಿರ್ಣಯ: **ಮೇಲ್ಕಂಡ ಮೂರು ವರ್ಷಗಳ ಆಂತರಿಕ ಲೆಕ್ಕತಪಾಸಣೆಯ ಒಟ್ಟು ವೆಚ್ಚಕ್ಕೆ ಸಭೆಯು ತನ್ನ ಅನುಮೋದನೆಯನ್ನು ನೀಡಿತು.**

**ಡಾ. ಚಂದ್ರಮೌಳಿ ಎಸ್. ನಾಯ್ಕರ**
ಸದಸ್ಯ ಕಾರ್ಯದರ್ಶಿ

**ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ**
ಅಧ್ಯಕ್ಷರು